# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಅಕ್ಟೋಬರ್ 10, 2021

ಸಂಪುಟ : 48 ಸಂಚಿಕೆ : 150 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com





**ದಾಂಡಿಯಾ ರಾಸ್**

ರಿದ್ಧಿ-ಸಿದ್ಧಿ ಫೌಂಡೇಶನ್ ವತಿಯಿಂದ ದಾವಣಗೆರೆಯ ಐ.ಎಂ.ಎ. ಹಾಲ್‌ನಲ್ಲಿ 14ನೇ ವರ್ಷದ ನವರಾತ್ರಿ ದಸರಾ ಹಬ್ಬದ ಅಂಗವಾಗಿ ಭಾರತೀಯ ಸಂಪ್ರದಾಯದಂತೆ ದಾಂಡಿಯಾ ರಾಸ್ ಕಾರ್ಯಕ್ರಮ ಶನಿವಾರ ಸಂಜೆ ನಡೆಯಿತು. ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಕೋಲು ಹಾಕುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ, ನಗರ ಪಾಲಿಕೆ ಸದಸ್ಯ ಮಂಜುನಾಥ ಗಡಿಗುಡಾಳ್, ಕೆಪಿಸಿಸಿ ಮುಖಂಡ ಆನಂದಸ್ವಾಮಿ ಗಡ್ಡದೇವರಮಠ, ಹರಪನಹಳ್ಳಿಯ ಉದ್ಯಮಿ ಉತ್ತಮ್‌ಚಂದ್ ಜೈನ್, ಯುವ ಮುಖಂಡರುಗಳಾದ ಶ್ರೀನಿವಾಸ ದಾಸಕರಿಯಪ್ಪ, ರಾಜು ಭಂಡಾರಿ, ವಿಜಯಕುಮಾರ್, ಶ್ರೀಕಾಂತ್ ಬಗರೆ, ರೂಪಾ, ಕೀರ್ತಿಶ್ರೀ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಈದ್-ಮಿಲಾದ್ ಆಚರಣೆಗೆ ಅವಕಾಶ ಕೊಡಿ

## ನಗರದ ಮುಸ್ಲಿಂ ಬಾಂಧವರಿಂದ ಹಿರಿಯ ಶಾಸಕ ಎಸ್ಸೆಸ್‌ಗೆ ಮನವಿ



ದಾವಣಗೆರೆ,ಅ.9- ಇದೇ ದಿನಾಂಕ 19ರಂದು ನಡೆಯಲಿರುವ ಈದ್ ಮಿಲಾದ್ ಹಬ್ಬವನ್ನು ಆಚರಿ ಸಲು ಅನುವು ಮಾಡಿಕೊಡಬೇಕು ಎಂದು ಸ್ಥಳೀಯ ಸಮಸ್ತ ಮುಸ್ಲಿಂ ಬಾಂಧವರು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರನ್ನು ವಿನಂತಿಸಿಕೊಂಡಿದ್ದಾರೆ.

ಈ ಸಂಬಂಧ ಎಸ್ಸೆಸ್ ಅವರ ನಿವಾಸಕ್ಕೆ ಇಂದು ಭೇಟಿ ನೀಡಿದ್ದ ಈದ್ - ಮಿಲಾದ್ ಹಬ್ಬದ ಸಮಿತಿ ಪದಾಧಿಕಾರಿಗಳು ಹಾಗೂ ತಂಜೀಮ್ ಸಲಹಾ ಸಮಿತಿ ಸದಸ್ಯರು, ಈದ್ - ಮಿಲಾದ್ ಹಬ್ಬದ ಆಚರಣೆ ಕುರಿತಂತೆ ಸಭೆ ನಡೆಸಿ ಚರ್ಚಿಸಿದರು.

ಈದ್ - ಮಿಲಾದ್ ಹಬ್ಬ ಆಚರಣೆ ಕುರಿತು ಸರ್ಕಾರ ನೀಡಿರುವ ಕೋವಿಡ್ ಮಾರ್ಗಸೂಚಿಯ ವಕ್ಫ್ ಇಲಾಖೆಯ ನಡವಳಿಗಳ ಸಂಬಂಧ ಸಭೆಯಲ್ಲಿ ಪ್ರಸ್ತಾಪವಾಯಿತು. ಈ ಹಬ್ಬವನ್ನು ಆಚರಿಸಲು ಅನುವು ಮಾಡಿಕೊಡಲು ಜಿಲ್ಲಾಡಳಿತ ದೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳ ಬೇಕು ಎಂದು ಮುಸ್ಲಿಂ ಬಾಂಧವರು ಎಸ್ಸೆಸ್ ಅವರನ್ನು ಕೇಳಿಕೊಂಡರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಎಸ್ಸೆಸ್, ಈ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಹಬ್ಬವನ್ನು ಆಚರಿಸಲು ಅವಕಾಶ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ (3ನೇ ಪುಟಕ್ಕೆ)






# ಹರಿಹರ ಕ್ಷೇತದಲ್ಲಿ ಜೆಡಿಎಸ್ ಶಕ್ತಿ ಕುಗ್ಗಿಸಲು ಸಾಧ್ಯವಿಲ್ಲ



ಮಲೇಬೆನ್ನೂರು, ಅ.9- ಅಪಪ್ರಚಾರ ದಿಂದ ಯಾರೂ ನನ್ನನ್ನು ಕುಗ್ಗಿಸಲು ಸಾಧ್ಯವಿಲ್ಲ. ಹರಿಹರ ತಾಲ್ಲೂಕಿನಲ್ಲಿ ಜೆಡಿಎಸ್ ಪಕ್ಷವು ಪ್ರಬಲವಾಗಿದ್ದು, ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ನಮ್ಮ ಅಭ್ಯರ್ಥಿಗಳೇ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ದೇವರಬೆಳಕೆರೆ ಪಿಕಪ್ ಡ್ಯಾಮ್‌ಗೆ ಬಾಗಿನ ಅರ್ಪಿಸಿದ ನಂತರ, ದೇವರಬೆಳಕೆರೆ ಗ್ರಾಮದಲ್ಲಿ ಇಂದು ಹಮ್ಮಿಕೊಂಡಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜೆಡಿಎಸ್ ಪಕ್ಷದವರು ಬಿಜೆಪಿ ಸೇರಿದ್ದಾ ರೆಂಬ ಸುಳ್ಳು ಪ್ರಚಾರದಿಂದ ನಮ್ಮ ಕಾರ್ಯ ಕರ್ತರ ಉತ್ಸಾಹ ಕಡಿಮೆ ಮಾಡುವ ಕುತಂತ್ರ ಫಲಿಸದು. ನಮ್ಮ ಜೊತೆಗೆ ಇರುವವರು ಗಟ್ಟಿ ಯಾಗಿದ್ದು, ಅವರನ್ನು ಯಾವುದೇ ಆಸೆ-ಆಮಿಷ ಗಳಿಂದ ಸೆಳೆಯಲು ಸಾಧ್ಯವಿಲ್ಲ ಎಂದು ಬಿಜೆಪಿ ಮುಖಂಡರಿಗೆ ಶಿವಶಂಕರ್ ಎಚ್ಚರಿಕೆ ನೀಡಿದರು.

> ಎಸ್. ರಾಮಪ್ಪ ಅವರು ಶಾಸಕರಾದ ನಂತರ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಗಿದ್ದು, ಅವರು ಅನುದಾನ ತಂದಿರುವ ಬಗ್ಗೆ ಶ್ವೇತಪತ್ರ ಬಿಡುಗಡೆ ಮಾಡಲಿ.
>
> - ಹೆಚ್.ಎಸ್. ಶಿವಶಂಕರ್, ಮಾಜಿ ಶಾಸಕರು

ಎಸ್. ರಾಮಪ್ಪ ಅವರು ಶಾಸಕ ರಾದ ನಂತರ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಗಿದ್ದು, ಅವರು ಅನುದಾನ ತಂದಿರುವ ಬಗ್ಗೆ ಶ್ವೇತಪತ್ರ ಬಿಡುಗಡೆ ಮಾಡಲಿ ಎಂದು ಹೇಳಿದ ಅವರು, ಭೈರನಪಾದ ಏತ ನೀರಾವರಿ ಯೋಜನೆಯ ಕಾಮಗಾರಿ ಆರಂಭವಾದರೆ, ಶಾಸಕ ರಾಮಪ್ಪ ಅವರನ್ನು ಸನ್ಮಾನಿಸುತ್ತೇನೆ ಎಂದರು.

ಸುಳ್ಳು ಹೇಳಿ ಜನರನ್ನು (4ನೇ ಪುಟಕ್ಕೆ)

## 2 ಪಾಸಿಟಿವ್, 1 ಸಾವು, 3 ಗುಣ

ದಾವಣಗೆರೆ, ಅ.9- ಜಿಲ್ಲೆಯಲ್ಲಿ ಇಬ್ಬರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ. ಮೂವರು ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ. 37 ಸಕ್ರಿಯ ಪ್ರಕರಣಗಳಿವೆ.














# ನಿಷೇಧಿಸಿದ್ದರೂ ದೇವದಾಸಿ ಪದ್ಧತಿ ನಿಲ್ಲಿಸಲಾಗಿಲ್ಲ

## ರಾಜ್ಯ ಮಟ್ಟದ ಜನಜಾಗೃತಿ ಕಲಾ ಜಾಥಾದ ಸಮಾರೋಪ ಕಾರ್ಯಕ್ರಮದಲ್ಲಿ ನ್ಯಾಯವಾದಿ ಅರುಣ್‌ಕುಮಾರ್ ಅಸಮಾಧಾನ



ದಾವಣಗೆರೆ, ಅ.9- ಹಲವಾರು ಸಂಘಟನೆಗಳ ಹೋರಾಟ ಹಾಗೂ ಅಕ್ಷರ ಅರಿವಿನ ಜಾಗೃತಿಯ ಮೂಲ ಧ್ವನಿಯಾಗಿ ದೇವದಾಸಿ ಪದ್ಧತಿ ನಿಷೇಧಿಸಿ 1982ರಲ್ಲಿ ಕಾಯ್ದೆಯನ್ನು ಜಾರಿಗೆ ತಂದಿದ್ದರೂ ಸಹ, ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿಲ್ಲ ಎಂದು ಹಿರಿಯ ವಕೀಲ ಎಲ್.ಹೆಚ್.ಅರುಣ್‌ಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ಮಹಾನಗರ ಪಾಲಿಕೆ ಆವರಣದಲ್ಲಿ ವಿಮುಕ್ತ ದೇವದಾಸಿ ವೇದಿಕೆ ಹಾಗೂ ಇತರೆ ಪ್ರಗತಿ ಪರ ಸಂಘಟನೆಗಳ ಸಹಯೋಗದಲ್ಲಿ ದೇವದಾಸಿ ಪದ್ಧತಿ ನಿರ್ಮೂಲನೆ, ಬದುಕುವ ಹಕ್ಕು ರಕ್ಷಣೆ ಮತ್ತು ಸಾಮಾಜಿಕ ನ್ಯಾಯ ನೀಡುವ ಸಮಗ್ರ ಕಾಯ್ದೆಗೆ ಒತ್ತಾಯಿಸಿ, ರಾಜ್ಯ ಮಟ್ಟದ ಜನಜಾಗೃತಿ ಕಲಾ ಜಾಥಾದ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇವದಾಸಿ ಪದ್ಧತಿ ಆಚರಣೆಯಿಂದ ಜನ್ಮ ತಾಳಿರುವ ಎಲ್ಲ ಮಕ್ಕಳ ಭವಿಷ್ಯ ರೂಪಿಸುವ ಸಲುವಾಗಿ, ನೂತನ ಕಾನೂನು ಅಗತ್ಯವಿದ್ದು, ಆ ನಿಟ್ಟಿನಲ್ಲಿ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಯಲದ ಪರಿಣಿತರಿಂದ ರೂಪಿಸಿರುವ ಸಮಗ್ರ ಕರಡು ಮಸೂದೆಯನ್ನು ಸರ್ಕಾರ ಪರಿಗಣಿಸಬೇಕು ಎಂದು ಹೇಳಿದರು.

ದೇವದಾಸಿ ಪದ್ಧತಿ ನಿರ್ಮೂಲನೆ, ಪುನರ್ ವಸತಿ ಮತ್ತು ದೇವದಾಸಿಯರ ಸಮೀಕ್ಷೆ ನಡೆಸುವ ಮೂಲಕ ಮಾಸಾಶನ ದೊರೆಯುವಂತೆ ಕಾರ್ಯೋನ್ಮುಖರಾಗಬೇಕು ಎಂದು ಅವರು ಕರೆ ನೀಡಿದರು.

ಪಿಯುಸಿಎಲ್ ಕರ್ನಾಟಕದ ಪ್ರೊ. ವೈ. ಜೆ.ರಾಜೇಂದ್ರ ಮಾತನಾಡಿ, ಬದುಕಿರುವ ಮಾಜಿ ದೇವದಾಸಿ ತಾಯಂದಿರು ಮತ್ತು ಅವರ ಮಕ್ಕಳ ಬದುಕುವ ಹಕ್ಕಿನ ಮೂಲಭೂತ ಪ್ರಶ್ನೆಗೆ ಸರ್ಕಾರ ಸೇರಿದಂತೆ ನಾಗರಿಕ ಸಮಾಜ ಉತ್ತರ ನೀಡಬೇಕಿದೆ. ಕಲಾ ಜಾಥಾದ ಮೂಲಕ ದೇವದಾಸಿಯರ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುತ್ತಿರುವ ವಿಮುಕ್ತ ಮಹಿಳಾ ದೇವದಾಸಿ ವೇದಿಕೆ ಕಾರ್ಯ ಶ್ಲಾಘನೀಯ ಎಂದು ತಿಳಿಸಿದರು.

ಕಲಾ ಜಾಥಾದ ಸಂಚಾಲಕ ಚಂದಾಲಿಂಗ ಕಲಾಲ್ಬಂಡಿ ಮಾತನಾಡಿ, ಸರ್ಕಾರ ವಿಶೇಷ ಪ್ಯಾಕೇಜ್ ನೀಡುವ ಮೂಲಕ ದೇವದಾಸಿ ತಾಯಂದಿರು ಮತ್ತು ಅವರ ಕುಟುಂಬದ ಮಕ್ಕಳು ತಮ್ಮ ಭವಿಷ್ಯದ ಸ್ವಾಭಿಮಾನದ ಬದುಕು ಕಟ್ಟಿಕೊಡಲು ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಸ್ಲಂ ಜನಾಂದೋಲನದ ರಾಜ್ಯ ಸಂಚಾಲಕ ಎ.ನರಸಿಂಹಮೂರ್ತಿ, ರಂಗ ನಿರ್ದೇಶಕ ಎಂ.ಆರ್. ಭೇರಿ, ವಕೀಲರಾದ ಡಿ.ಎಸ್.ಬಾಬಣ್ಣ, ಅನಿಷ್ ಪಾಷಾ, ಕಟ್ಟಡ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಹೆಚ್.ಜಿ.ಉಮೇಶ್, ಸ್ಲಂ ಜನಾಂದೋಲನದ ಕರ್ನಾಟಕ ಜಿಲ್ಲಾ ಸಂಚಾಲಕರಾದ ರೇಣುಕಾ ಎಲ್ಲಮ್ಮ, ಶಬ್ಬೀರ್ ಸಾಬ್, ಸಾವಿತ್ರಮ್ಮ, ಪಡಿಯಮ್ಮ ಸೇರಿದಂತೆ, ಇತರರು ಇದ್ದರು.

ಕಾರ್ಯಕ್ರಮದಲ್ಲಿ ಜಾಥಾದವರು ಪ್ರಸ್ತುತ ಪಡಿಸಿದ 'ದೇವರಿಗೆ ಸವಾಲು' ನಾಟಕ ಪ್ರದರ್ಶನ ಜನರ ಪ್ರಶಂಸೆಗೆ ಪಾತ್ರವಾಯಿತು.

## ಗ್ರಾಮದೇವತೆಗೆ ವಿಶೇಷ ಪೂಜೆ



ಹರಿಹರ, ಅ.9- ನಗರದ ಮುಖ್ಯ ರಸ್ತೆಯಲ್ಲಿರುವ ಕಸಬಾ ಶ್ರೀ ಗ್ರಾಮದೇವತೆ ದೇವಸ್ಥಾನದಲ್ಲಿ ನವರಾತ್ರಿ ಹಬ್ಬದ ಪ್ರಯುಕ್ತ ಇಂದು ದೇವಿಗೆ ವಿಶೇಷ ಪೂಜೆ, ಅಲಂಕಾರ, ಸಂಜೆ ವಿವಿಧ ಮಹಿಳಾ ಭಜನಾ ಮಂಡಳಿಗಳಿಂದ ಭಜನೆ ಕಾರ್ಯಕ್ರಮ ನಡೆಸಲಾಯಿತು.

## ಹಬ್ಬಕ್ಕೆ ವಿಶೇಷ ರೈಲುಗಾಡಿ ಓಡಿಸಲು ಮನವಿ

ದಾವಣಗೆರೆ, ಅ.9- ನೈರುತ್ಯ ರೈಲ್ವೇಯಿಂದ ಹಬ್ಬದ ವಿಶೇಷ ರೈಲುಗಾಡಿಗ ಳನ್ನು ಓಡಿಸುವಂತೆ ನೈರುತ್ಯ ರೈಲ್ವೇ ಜನರಲ್ ಮ್ಯಾನೇಜರ್ ಅವರಿಗೆ ನೈರುತ್ಯ ರೈಲ್ವೇ ವಲಯ ಪ್ರಯಾಣಿಕರ ಸಂಘದಿಂದ ಮನವಿ ಮಾಡಲಾಗಿದೆ. ಹಬ್ಬಕ್ಕಾಗಿ ಪ್ರಯಾಣ ಬೆಳೆಸುವ ಯಾತ್ರಿಕರ ಜನದಟ್ಟಣೆಯನ್ನು ತಡೆಯುವ ನಿಟ್ಟಿನಲ್ಲಿ ವಿಶೇಷ ರೈಲುಗಳು ಸಹಕಾರಿಯಾಗಲಿವೆ ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ ಎಂದು ಸಂಘದ ಮುಖ್ಯ ಕಾರ್ಯದರ್ಶಿ ರೋಹಿತ್ ಎಸ್. ಜೈನ್ ತಿಳಿಸಿದ್ದಾರೆ.

## ಮೊಬೈಲ್-ಮಾಯೆ

ಮೊಬೈಲ್ ಮೊಬೈಲ್ ಮೊಬೈಲ್
ಎಲ್ಲರ ಕೈಯಲ್ಲೂ ಮೊಬೈಲ್
ಊಟ ವಿಶ್ರಾಂತಿಯ ಸಮಯದಲ್ಲೂ
ಬಿಟ್ಟೆನೆಂದರೂ ಬಿಡದ ಮೊಬೈಲ್ !

ಎತ್ತೆತ್ತಲೋ ಗಮನ
ಅರ್ಥವಾಗದ ಮಾತು
ವಾಹನ ಚಾಲನೆ ಎತ್ತೋ
ಮುಂಬರುವ ವಾಹನಕ್ಕೆ ಡಿಕ್ಕಿ
ಇದು ನಿನ್ನ ಮಾಯೆ ಮೊಬೈಲ್ !

ಮೊಬೈಲ್ ನಮ್ಮ ಜೀವನದಲ್ಲಿ
ನಮ್ಮನ್ನು ಎಷ್ಟೊಂದು ಆವರಿಸಿದೆ
ಅಬಾಲ ವೃದ್ಧರಿಂದ ಎಲ್ಲರೂ
ಮೊಬೈಲ್ ಮಾಯೆಯ ಜಾಲದಲಿ
ಇದು ನಿನ್ನ ಮಾಯೆ ಮೊಬೈಲ್ !

ಮೊಬೈಲ್ ನಿನ್ನ ವರ್ಣಿಸಲು
ಪದಗಳೇ ಸಾಲುತ್ತಿಲ್ಲ
ಹಿತಕಾರಿ ಅಪಾಯಕಾರಿ ಮೊಬೈಲ್ !

ಪ್ರೀತಿ ಸ್ನೇಹ ವಿಶ್ವಾಸ ಸಹಕಾರ
ನಿನ್ನಿಂದ ಬಲು ದೂರವಾಯಿತು
ಹತ್ತಿರವೂ ಆಯಿತು
ತಂದೆ ತಾಯಿ ಮಕ್ಕಳು ಶಿಕ್ಷಕರ
ಸಂಬಂಧವು ದೂರವಾಯಿತು
ಹತ್ತಿರವೂ ಆಯಿತು
ಇದೆಲ್ಲಾ ನಿನ್ನ ಮಾಯೆ ಮೊಬೈಲ್ !

ಏನೆಂದು ಹೇಳಲಾರೆ
ಮತ್ತೇನು ಬರೆಯಲಾರೆ
ವಂದಿಸಲೋ ನಿಂದಿಸಲೋ
ನೀನೆ ಹೇಳು ಮೊಬೈಲ್
ಇದು ನಿನ್ನ ಮಾಯೆ ಮೊಬೈಲ್ !

- ಜೆಂಬಿಗಿ ಮೃತ್ಯುಂಜಯ
ಉಪನ್ಯಾಸಕರು, ಲೇಖಕರು, ದಾವಣಗೆರೆ

# ಹೊನ್ನಾಳಿ : ವನಯಾತ್ರಿ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ



ಹೊನ್ನಾಳಿ, ಸೆ.9- ವನಯಾತ್ರಿ ಸಂಸ್ಥೆ ವತಿಯಿಂದ ದತ್ತು ಪಡೆದ ಟಿ.ಬಿ. ಸರ್ಕಾರಿ ಉನ್ನತೀಕರಿಸಿದ ಕನ್ನಡ-ಆಂಗ್ಲ ಮಾಧ್ಯಮ ಶಾಲೆಯಲ್ಲಿ 5 ಹಾಗೂ 6ನೇ ತರಗತಿಯ ಕನ್ನಡ ಮಾಧ್ಯಮದ ಮಕ್ಕಳಿಗೆ 3 ಲಕ್ಷ ರೂಪಾಯಿ ವೆಚ್ಚದ 43 ಸೈಕಲ್‌ಗಳ ವಿತರಣೆಯನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಗಿತ್ತು.

ರಾಜ್ಯದಲ್ಲಿರುವ ಲಾಭದಾಯಕ ಸಂಸ್ಥೆಗಳು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿ ಪಡಿಸುವ ಮೂಲಕ ಬಡ ಮಕ್ಕಳ ಶಿಕ್ಷಣದ ಪ್ರಗತಿಗೆ ಮುಂದಾಗಬೇಕಿದೆ ಎಂದು ಕೆನರಾ ರೋಬಿಕೊಮ್ಯಾಚ್ ವೆಲ್‌ಫಂಡ್ ಕಂಪನಿ ಬೆಂಗಳೂರಿನ ಸಿಎಸ್‌ಆರ್ ಆದ ಹುಬ್ಬಳ್ಳಿಯ ಮಲ್ಲಪ್ಪ ಬೆನ್ನೂರ ಹೇಳಿದರು.

ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಮಾಸಡಿ ನಾಗರಾಜ್ ಸಂಸ್ಥೆಯ ಮುಖ್ಯಸ್ಥ ರಘು ಅವರ ಸೇವಾ ಕಾರ್ಯವನ್ನು ಶ್ಲಾಘಿಸಿದರು. ಬಿಆರ್‌ಸಿ ಉಮಾಶಂಕರ್, ಪುರಸಭಾ ಅಧ್ಯಕ್ಷೆ ರಂಜಿತಾ ಚನ್ನಪ್ಪ, ಮುಖ್ಯ ಶಿಕ್ಷಕ ಯೋಗೇಂದ್ರ ಕುಮಾರ್, ಎಸ್‌ಡಿಎಂಸಿ ಉಪಾಧ್ಯಕ್ಷೆ ರೇಷ್ಮಾ, ತಾಲ್ಲೂಕು ಎಸ್‌ಡಿಎಂಸಿ ಅಧ್ಯಕ್ಷ ಶಿವಲಿಂಗಪ್ಪ, ರುದ್ರನಾಯ್ಕ, ರುದ್ರಯ್ಯ ಮಾತನಾಡಿದರು.

ಶಾಲಾ ಪೋಷಕರಾದ ಬಿ.ಎನ್. ಉಮೇಶ್, ದಾಕ್ಷಾಯಿಣಿ, ರೂಪ, ಉಮೇಶ್ ಬಂತಿ, ಚನ್ನೇಶ್, ರಾಜಣ್ಣ, ಮಂಜುನಾಥ್, ಗೌರಮ್ಮ, ಅಶ್ವಿನಿ, ಶಿಕ್ಷಕರಾದ ಸುರೇಶ್, ಕೊಟ್ರೇಶ್, ಮಹೇಶ್, ಶಾಂತವೀರಯ್ಯ, ನಿರಂಜನ್, ವಾಣಿ, ರೇಖಾ ಇನ್ನಿತರರಿದ್ದರು.

# ರೈತ ಸುಖವಾಗಿದ್ದರೆ ದೇಶವೇ ನೆಮ್ಮದಿ

## ಸತ್ತೂರಿನ ತುಂಬಿದ ಕೆರೆಗೆ ಬಾಗಿನ ಅರ್ಪಣೆಯಲ್ಲಿ ಎಂ.ಪಿ. ವೀಣಾ ಮಹಾಂತೇಶ್



ಹರಪನಹಳ್ಳಿ, ಅ.9- ತಾಲ್ಲೂಕಿನ ವಿವಿಧೆಡೆ ಉತ್ತಮ ಮಳೆಯಾಗಿದ್ದು, ರೈತರ ಮುಖದಲ್ಲಿ ಮಂದಹಾಸ ಮೂಡಿದೆ ಎಂದು ಎಂ.ಪಿ. ಪ್ರಕಾಶ್ ಸಮಾಜ ಮುಖಿ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಎಂ.ಪಿ. ವೀಣಾ ಮಹಾಂತೇಶ್ ಚರಂತಿಮಠ್ ತಿಳಿಸಿದರು.

ಸತ್ತೂರಿನ ತುಂಬಿದ ಕೆರೆಗೆ ಬಾಗಿನ ಅರ್ಪಿಸಿ, ನಂತರ ಕೆರೆ ದಡದಲ್ಲಿ ಮಹಿಳೆಯರಿಗೆ ಉಡಿ ತುಂಬಿದ ನಂತರ ಅವರು ಮಾತನಾಡಿದರು.

ಈ ದೇಶದ ಬೆನ್ನೆಲುಬು ರೈತನಾಗಿದ್ದು, ರೈತರು ಸುಖವಾಗಿದ್ದರೆ ಇಡೀ ದೇಶವೇ ನೆಮ್ಮದಿಯಾಗಿರುತ್ತದೆ. ಈ ಬಾರಿ ತಾಲ್ಲೂಕಿನ ಹಳ್ಳಿಕೇರಿ, ಕಂಚಿಕೇರಿ, ಸತ್ತೂರು, ಶಿಂಗ್ರಿಹಳ್ಳಿ, ಲಕ್ಷ್ಮೀಪುರ, ರಾಗಿಮಸಲವಾಡ ಸೇರಿದಂತೆ ವಿವಿಧೆಡೆ ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಕಟಾವಿಗೆ ಬಂದ ಮೆಕ್ಕೆಜೋಳ, ಜೋಳ ಸೇರಿದಂತೆ ಹಲವು ಬೆಳೆಗಳು ಜಲಾವೃತವಾಗಿವೆ. ಬೇಸಿಗೆಯಲ್ಲಿ ಜನ, ಜಾನುವಾರುಗಳಿಗೆ ನೀರಿನ ಅಭಾವ ಆಗದಂತೆ ಕೆರೆ-ಕಟ್ಟೆಗಳೆಲ್ಲ ತುಂಬಿ ಸಮೃದ್ಧವಾಗಿವೆ ಎಂದು ಹೇಳಿದರು.

ನಿರಂತರವಾಗಿ ಸುರಿದ ಮಳೆಯಿಂದ ಹಾನಿಗೊಳಗಾದ ಜನರಿಗೆ ಪರಿಹಾರ ನೀಡಬೇಕು. ಸತ್ತೂರು ಕೆರೆಯ ನೀರು ಬಸಿಯುತ್ತಿರುವುದರಿಂದ ಕೆರೆಗೆ ಧಕ್ಕೆಯಾಗದಂತೆ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಬೇಕು ಎಂದು ತಹಶೀಲ್ದಾರರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಮನವಿ ಮಾಡಿದ್ದೇನೆ ಎಂದರು.


ಪುರಸಭೆ ಮಾಜಿ ಅಧ್ಯಕ್ಷರಾದ ಕವಿತಾ ವಾಗೀಶ್, ಗಾಯಿತ್ರಮ್ಮ ಹಾಗೂ ಇನ್ನಿತರರಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ಲಿಂಗಾಯತ ಸಮಾಜದ ಸಭೆ

ರಾಣೇಬೆನ್ನೂರು ತಾಲ್ಲೂಕು ಸಾಧು ಲಿಂಗಾಯತ ಸಮಾಜದಿಂದ ಇಂದು ಬೆಳಿಗ್ಗೆ 11 ಕ್ಕೆ ತಾಲ್ಲೂಕು ಕಾರ್ಯಕಾರಿ ಆಡಳಿತ ಮಂಡಳಿ ಆಯ್ಕೆ ಕುರಿತು ಪೂರ್ವಭಾವಿ ಸಭೆಯನ್ನು ಶಿವಾ ಹೈಸ್ಕೂಲ್ ಹೊಸಮನಿ ಸಿದ್ದಪ್ಪ ಮಹಾವಿದ್ಯಾಲಯದಲ್ಲಿ ಕರೆಯಲಾಗಿದೆ.

ಸಭೆಯಲ್ಲಿ ತಾಲ್ಲೂಕು ಕಾರ್ಯಕಾರಿ ಸಮಿತಿ ರಚನೆ, ಕಾರ್ಯಕಾರಿ ಸಮಿತಿಯನ್ನು 5 ವಿಭಾಗಗಳಾಗಿ ವಿಂಗಡಿಸುವುದು ಇತ್ಯಾದಿ ವಿಷಯಗಳ ಕುರಿತು ಚರ್ಚಿಸಲಾಗುವುದು ಎಂದು ವಕೀಲರಾದ ಯು.ಎನ್. ಗುರುಲಿಂಗಪ್ಪ ಗೌಡ್ರು ತಿಳಿಸಿದ್ದಾರೆ.


## 40ನೇ ಪುಣ್ಯಸ್ಮರಣೆ



**ದಿ|| ಪೂನಂಚಂದ್ ಟಿ. ಷಾ**

ದೈವಾಧೀನ : 10.10.1981

ನಮ್ಮ ಪೂಜ್ಯ ತಂದೆಯವರು ದೈವಾಧೀನರಾಗಿ ಇಂದಿಗೆ 40 ವರ್ಷಗಳು ಕಳೆದಿರುತ್ತವೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ

ಶ್ರೀ ರಮಣ್‌ಲಾಲ್ ಪಿ. ಸಂಘವಿ ಮತ್ತು ಸಹೋದರರು ಹಾಗೂ ಇವರ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಸ್ನೇಹಿತರು, ದಾವಣಗೆರೆ.



## ಪುಣ್ಯಸ್ಮರಣೆ



**ದಿ|| ಪೂನಂ ಚಂದ್ ಟಿ. ಷಾ**

ದೈವಾಧೀನ : 10.10.1981

ನಮ್ಮ ಬ್ಯಾಂಕಿನ ಸಂಸ್ಥಾಪಕರೂ ಹಾಗೂ ಮಾಜಿ ಅಧ್ಯಕ್ಷರಾದ ದಿ|| ಪೂನಂ ಚಂದ್ ಟಿ. ಷಾ ಇವರು ದೈವಾಧೀನರಾಗಿ ಇಂದಿಗೆ 40 ವರ್ಷಗಳು ಕಳೆದವು. ಇವರ ಮಾರ್ಗದರ್ಶನವೇ ನಮಗೆ ಸ್ಫೂರ್ತಿಯಾಗಿದ್ದು, ಭಗವಂತನು ಇವರ ಆತ್ಮಕ್ಕೆ ಸದಾ ಶಾಂತಿ ನೀಡಲಿ ಎಂದು ಪ್ರಾರ್ಥಿಸುವ,

ಶ್ರೀ ಮುರುಗೇಶ್ ಎನ್.ಎ — ಅಧ್ಯಕ್ಷರು
ಶ್ರೀ ವೀರಣ್ಣ ಎಸ್.ಕೆ. — ಉಪಾಧ್ಯಕ್ಷರು

**ನಿರ್ದೇಶಕರುಗಳು :**

- ಶ್ರೀ ರಮಣ್‌ಲಾಲ್ ಪಿ. ಸಂಘವಿ
- ಶ್ರೀ ಕುಬೇರಪ್ಪ ಎ.ಹೆಚ್
- ಶ್ರೀ ಶಂಕರ್ ಖಟಾವ್‌ಕರ್
- ಶ್ರೀಮತಿ ಶಶಿಕಲಾ ರುದ್ರಯ್ಯ ಪಿ.ಎಂ.
- ಶ್ರೀಮತಿ ಅನಿಲಾ ಇಂಧೂದರ್ ನಿಶಾನಿಮಠ್
- ಶ್ರೀ ನಾಗೇಂದ್ರಚಾರಿ ಬಿ.
- ಶ್ರೀ ಕೊಟ್ರೇಶ್ ಎ.
- ಶ್ರೀ ಕಿರಣ್ ಆರ್. ಶೆಟ್ಟಿ
- ಶ್ರೀ ಕಿರುವಾಡಿ ವಿ. ಸೋಮಶೇಖರ್
- ಶ್ರೀಮತಿ ಜಯಮ್ಮ ಪರಶುರಾಮಪ್ಪ
- ಶ್ರೀ ಪ್ರಭು ಪ್ರಸಾದ್ ಎಸ್.ಕೆ.
- ಶ್ರೀ ಜ್ಯೋತಿ ಪ್ರಕಾಶ್ ಕೆ.ಎಂ.
- ಶ್ರೀ ವೆಂಕಪ್ಪ ಪಿ.ಹೆಚ್.
- ಶ್ರೀ ಶಿವಯೋಗಪ್ಪ ಕೆ.ಹೆಚ್.
- ಶ್ರೀ ಶಿರಸಾಲಿಮಠ್ ಆರ್.ವಿ.

**ನಿರ್ವಹಣಾ ಮಂಡಲಿ ಸದಸ್ಯರುಗಳು**

ಶ್ರೀ ಬಸವರಾಜ್ ಕೆ.ಎಂ. ಶ್ರೀಮತಿ ವಸುಂಧರ ಜಿ.ಸಿ. ಶ್ರೀಮತಿ ಶೈಲ ಕೆ.ಎಂ.

**ವಿಶೇಷ ಆಹ್ವಾನಿತರುಗಳು :**

ಶ್ರೀ ವೀರಣ್ಣ ಜಿ.ಕೆ. ಶ್ರೀಮತಿ ಉಮಾ ವಾಗೀಶ್

ಶ್ರೀ ಶಿವಲಿಂಗಸ್ವಾಮಿ ಎಂ. ಪ್ರಧಾನ ವ್ಯವಸ್ಥಾಪಕರು
ಬ್ಯಾಂಕಿನ ಸಿಬ್ಬಂದಿ ವರ್ಗದವರು

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ.,**


## ಖೇಲೋ ಇಂಡಿಯಾ ಯೋಜನೆ ಅರ್ಜಿ

ದಾವಣಗೆರೆ, ಅ. 9- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಖೇಲೋ ಇಂಡಿಯಾ ಯೋಜನೆಯಡಿ ರಾಜ್ಯ ಉತ್ಕೃಷ್ಟತಾ ಕೇಂದ್ರಕ್ಕೆ ಗುತ್ತಿಗೆ ಆಧಾರದ ಮೇಲೆ ಸ್ಪೋರ್ಟ್ಸ್ ಮಾಸ್ಟರ್, ಸ್ಪೋರ್ಟ್ಸ್ ನ್ಯೂಟ್ರಿಷಿನಿಸ್ಟ್, ಯಂಗ್ ಪ್ರೊಫೆಷನಲ್ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ದಾವಣಗೆರೆ ಇಲ್ಲಿ ಪಡೆದು, ಇದೇ ದಿನಾಂಕ 11 ರೊಳಗೆ ಸಲ್ಲಿಸಬೇಕು. ಮಾಹಿತಿಗಾಗಿ ದೂರವಾಣಿ 08192-237480 ಗೆ ಸಂಪರ್ಕಿಸಬಹುದಾಗಿದೆ.

# ನಗರದಲ್ಲಿ ಇಂದು 'ಕ್ಯಾನ್ಸರ್ ನಡೆ - 2021'

ದಾವಣಗೆರೆ ಕ್ಯಾನ್ಸರ್ ಫೌಂಡೇಶನ್ ಜನ ಜಾಗೃತಿಗಾಗಿ 'ಕ್ಯಾನ್ಸರ್ ನಡೆ - 2021' ಅಭಿಯಾನವನ್ನು ಇಂದು ಬೆಳಿಗ್ಗೆ 8 ರಿಂದ 9 ರವರೆಗೆ ಟಿ.ವಿ. ಸ್ಟೇಷನ್ ವಿಮಾನ ಮಟ್ಟಿಯಲ್ಲಿ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಟ್ರಸ್ಟಿ ಡಾ. ಎ.ಎಂ. ಶಿವಕುಮಾರ್, ಕಾರ್ಯದರ್ಶಿ ಡಾ. ಸುನೀಲ್ ಬ್ಯಾಡಗಿ ತಿಳಿಸಿದ್ದಾರೆ.

ಗ್ರೇಸ್ ಫೌಂಡೇಶನ್ ಹೈದರಾಬಾದ್, ದಾವಣಗೆರೆಯ ರೆಡ್ ಕ್ರಾಸ್ ಸಂಸ್ಥೆ, ಐ.ಎಂ.ಎ ದಾವಣಗೆರೆ, ಲೈಫ್ ಲೈನ್, ದಾವಣಗೆರೆ ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಗೆಳೆಯರು ಪ್ರತಿಷ್ಠಾನ, ಭಾರತೀಯ ವಿಕಾಸ ಪರಿಷತ್, ವರದಿಗಾರರ ಕೂಟ ಇವರ ಸಹಯೋಗದೊಂದಿಗೆ ಈ ಅಭಿಯಾನ ಏರ್ಪಾಡಾಗಿದೆ.

ಮಹಾಪೌರ ಎಸ್.ಟಿ. ವೀರೇಶ್ ಉದ್ಘಾಟಿಸಲಿದ್ದಾರೆ. ಆಯುಕ್ತ ವಿಶ್ವನಾಥ್ ಮುದಜ್ಜಿ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

ಕ್ಯಾನ್ಸರ್ ಫೌಂಡೇಶನ್ ಅಧ್ಯಕ್ಷ ಡಾ. ಶ್ರೀಶೈಲ ಬ್ಯಾಡಗಿ ಅವರ ನೇತೃತ್ವದಲ್ಲಿ ನಡೆಯಲಿರುವ ಈ ಅಭಿಯಾನದಲ್ಲಿ ಆಸಕ್ತರು ಟಿ.ವಿ. ಸ್ಟೇಷನ್ ನೀರು ಸಂಗ್ರಹಗಾರದ ಸುತ್ತ ನಡಿಗೆಯ ಮೂಲಕ ಪಾಲ್ಗೊಳ್ಳಲಿದ್ದಾರೆ.

ಪರೋಕ್ಷ ನಡೆಯಲ್ಲಿ ಭಾಗವಹಿಸುವವರು ತಾವು ಇರುವ ಸ್ಥಳದಲ್ಲಿ ನಡಿಗೆ ಮಾಡಿ ಅದರ 30 ಸೆಕೆಂಡ್ ಸೆಲ್ಫೀ ವಿಡಿಯೋವನ್ನು ದಾವಣಗೆರೆ ಕ್ಯಾನ್ಸರ್ ಫೌಂಡೇಶನ್ ಫೇಸ್ ಬುಕ್ ಪೇಜ್‌ಗೆ ಲಗತ್ತಿಸಲು ಫೌಂಡೇಶನ್ ರಾಯಭಾರಿ ಅರುಣ್ ಕುಮಾರ್ ಆರ್. ಟಿ. ಮನವಿ ಮಾಡಿದ್ದಾರೆ.


## ಪ್ರಥಮ ವರ್ಷದ ಪುಣ್ಯಸ್ಮರಣೆ




**ದಿ|| ಜಿ.ಎಂ. ಮಹಾಂತಮ್ಮ ಮಹೇಶ್ವರಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯತ್ತಿರುವ

ದುಃಖತಪ್ತ
ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಮತ್ತು ಅಳಿಯ



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 07.10.2021ರಂದು ನಿಧನರಾದ ಕರ್ನಾಟಕ ಯೂತ್ಸ್ ಅಸೋಸಿಯೇಷನ್ (ರಿ) ಸಂಘದ ಕಾರ್ಯಕರ್ತರಾಗಿದ್ದ

**ಶ್ರೀ ಬೆಳಗಾವಿ ರವೀಂದ್ರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಕರ್ನಾಟಕ ಯೂತ್ಸ್ ಅಸೋಸಿಯೇಷನ್ (ರಿ)**
ನರಸರಾಜ ರೋಡ್, ದಾವನಣಗೆರೆ


## ಹೊನ್ನಮರಡಿ ಹಾಲಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೊನ್ನಮರಡಿ ಗ್ರಾಮದ ವಾಸಿ ಹೆಚ್.ಎಂ ಹಾಲಯ್ಯ ಇವರ ಧರ್ಮಪತ್ನಿ ಶ್ರೀಮತಿ ಹಾಲಮ್ಮ (80) ಇವರು ದಿನಾಂಕ 09.10.2021ರ ಶನಿವಾರ ಮಧ್ಯಾಹ್ನ 12.30ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.10.2021ರ ಭಾನುವಾರ ಬೆಳಗ್ಗೆ 10 ಗಂಟೆಗೆ ಹೊನ್ನಮರಡಿ ಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ.

## ಶ್ರೀಮತಿ ಅನುಸೂಯಮ್ಮ ನಿಧನ



ಚನ್ನಗಿರಿ ತಾಲ್ಲೂಕು ಕಾರಿಗನೂರು ಗ್ರಾಮದ ವಾಸಿ ದಿ|| ಶಂಕರನಹಳ್ಳಿ ಗೌಡ್ರು ಮಂಜಪ್ಪನವರ ಧರ್ಮಪತ್ನಿ ಶ್ರೀಮತಿ ಅನುಸೂಯಮ್ಮ (73) ಅವರು ದಿನಾಂಕ 9.10.2021ರ ಶನಿವಾರ ಸಂಜೆ 6.10ಕ್ಕೆ ನಿಧನರಾಗಿದ್ದಾರೆ. ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.10.2021ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಕಾರಿಗನೂರು ಗ್ರಾಮದಲ್ಲಿ ನೆರವೇರಲಿದೆ.

## ಜಿಲ್ಲಾ 16 ವರ್ಷ ಒಳಗಿನ ಕ್ರಿಕೆಟ್ ತಂಡದ ಆಯ್ಕೆ

ದಾವಣಗೆರೆ, ಅ. 9- ಕೆ.ಎಸ್.ಸಿ.ಎ. ತುಮಕೂರು ವಲಯ, ದಾವಣಗೆರೆ ಜಿಲ್ಲಾ 16 ವರ್ಷದೊಳಗಿನ ಕ್ರಿಕೆಟ್ ತಂಡದ ಆಯ್ಕೆ ಇದೇ ದಿನಾಂಕ 12ರ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಬಾಪೂಜಿ ಎಂಬಿಎ(ಟರ್ಫ್) ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ ಎಂದು ಕೆ.ಎಸ್.ಸಿ.ಎ ಜಿಲ್ಲಾ ಸಂಚಾಲಕ ಕೆ.ಎನ್. ಗೋಪಾಲಕೃಷ್ಣ (7899610318) ತಿಳಿಸಿದ್ದಾರೆ.


## ಅತ್ತಿಗೆರೆ ಹೆಚ್.ಕೆ. ನಾಗಪ್ಪ ನಿಧನ



ದಾವಣಗೆರೆ ತಾಲ್ಲೂಕು ಅತ್ತಿಗೆರೆ ಗ್ರಾಮದ ವಾಸಿ ದಿ|| ಹೊರಟ್ಟಿ ಕಲ್ಲಿಂಗಪ್ಪನವರ ಪುತ್ರರಾದ **ಶ್ರೀ ಹೆಚ್.ಕೆ. ನಾಗಪ್ಪ** ಅವರು ದಿನಾಂಕ 9.10.2021ರ ಶನಿವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.10.2021ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಅತ್ತಿಗೆರೆ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ
ಹೊರಟ್ಟಿ ವಂಶಸ್ಥರು, ಅತ್ತಿಗೆರೆ. ಮೊ. : 96321 42164



## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಡಿ.ಎಸ್. ನಾಗರಾಜ್**
(ಕ್ಯಾಪ್ ಮಾರ್ಟ್)
ನಿಧನ : 10-10-2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ

ಪತ್ನಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಡೋಯಿಜೋಡೆ ಕುಟುಂಬ ವರ್ಗ


## ನಗರದಲ್ಲಿ ನಾಳೆ ಲೇಡಿಸ್ ಕ್ಲಬ್‌ನಿಂದ ದಾಂಡಿಯಾ ನೃತ್ಯ

ದಾವಣಗೆರೆ, ಅ.9 - ಲೇಡಿಸ್ ಕ್ಲಬ್ ವತಿಯಿಂದ ಎಬಿಸಿಡಿ+ ನೃತ್ಯ ಸಂಸ್ಥೆಯ ಇವರ ಸಹಯೋಗದಲ್ಲಿ ದಸರಾ ಹಬ್ಬದ ಪ್ರಯುಕ್ತ ನಾಡಿದ್ದು ದಿನಾಂಕ 11 ರ ಸೋಮವಾರ ಸಂಜೆ 5 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ದಾಂಡಿಯಾ ಧಮಾಲ್ ನೃತ್ಯ ಸ್ಪರ್ಧೆ ನಡೆಯಲಿದೆ.

ವಿವರಕ್ಕೆ ವಿನೋದ ಶೆಟ್ಟಿ (99455 75594), ಚೇತನ ಶಿವಕುಮಾರ್ (97312 89333), ಪದ್ಮಪ್ರಿಯ (78925 02577), ಲಕ್ಷ್ಮಿ ಸತೀಶ್ (99724 60142) ಅವರುಗಳನ್ನು ಸಂಪರ್ಕಿಸಬಹುದು ಎಂದು ಲೇಡಿಸ್ ಕ್ಲಬ್ ಸಂಸ್ಥಾಪಕರಾದ ಅಮೀರಾಬಾನು ತಿಳಿಸಿದ್ದಾರೆ.

# ನಿಸ್ವಾರ್ಥ ಸಮಾಜ ಸೇವೆಯಿಂದ ಜೀವನ ಸಾರ್ಥಕ



**ಭರಮಸಾಗರದ ಗ್ರಾ.ಪಂ ಅಧ್ಯಕ್ಷೆ ಶ್ರೀಮತಿ ಪುಷ್ಪಲತಾ ಜಗದೀಶ್ ಅಭಿಮತ**

ಭರಮಸಾಗರ, ಅ.9- ಮಾನವನ ಬದುಕಿಗೆ, ಮಾನವೀಯ ಮೌಲ್ಯದೊಂದಿಗೆ ನಿಸ್ವಾರ್ಥ ಸಮಾಜ ಸೇವೆಯಿಂದ ಜೀವನಕ್ಕೆ ಸಾರ್ಥಕತೆ ಬರುವುದು ಎಂದು ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾದ ಶ್ರೀಮತಿ ಪುಷ್ಪಲತಾ ಜಗದೀಶ್ ಅಭಿಪ್ರಾಯಪಟ್ಟರು.

ಇಲ್ಲಿನ ಪವಮಾನ ಪ್ರತಿಷ್ಠಾನದ ಆಶ್ರಯದಲ್ಲಿ ಮೊನ್ನೆ ಹಮ್ಮಿಕೊಳ್ಳಲಾಗಿದ್ದ ಕೋವಿಡ್‌ಗೆ ಬಲಿಯಾದ ಜೀವಗಳಿಗೆ ಶ್ರದ್ಧಾಂಜಲಿ ಮತ್ತು ನುಡಿ ನಮನ ಕಾರ್ಯಕ್ರಮದ ಸರಳ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ ಮಾತನಾಡಿ, ಪ್ರಸ್ತುತ ವಾತಾವರಣದಲ್ಲಿ ಕೆಲವು ವೈದ್ಯರು, ಆಸ್ಪತ್ರೆಗಳು ವಾಣಿಜ್ಯವಾಗಿ, ವ್ಯವಹಾರಿಕವಾಗಿ ಹಣ ಗಳಿಕೆಗೆ ಹೊಂಚು ಹಾಕುತ್ತಿರುವುದು ವಿಷಾದದ ಸಂಗತಿ ಎಂದು ತಿಳಿಸಿದರು.

ಪ್ರತಿಷ್ಠಾನದ ಗೌರವ ಅಧ್ಯಕ್ಷರಾದ ಶ್ರೀಮತಿ ಜಯಮ್ಮ ಜಯರಾವ್, ಕನ್ನಡಪ್ರಭ ವಿಶ್ರಾಂತ ಹಿರಿಯ ಸಂಪಾದಕ ಬಿ.ಜೆ. ರಾಮಚಂದ್ರರಾವ್, ಶ್ರೀಮತಿ ಬಿ.ಲೋಲಾಕ್ಷಮ್ಮ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮಿ ಅನಂತಪದ್ಮನಾಭ ರಾವ್ ಪ್ರಾರ್ಥಿಸಿದರು, ಪ್ರತಿಷ್ಠಾನದ ಸಂಸ್ಥಾಪಕ, ಹಿರಿಯ ಪತ್ರಕರ್ತ ಬಿ.ಜೆ ಅನಂತಪದ್ಮನಾಭ ರಾವ್ ಸ್ವಾಗತಿಸಿದರು, ಆಶಾ ಅಚ್ಯುತರಾವ್ ವಂದಿಸಿದರು.

## ಮಲೇಬೆನ್ನೂರು: ನಾಳೆ ರಕ್ತದಾನ ಶಿಬಿರ

ಮಲೇಬೆನ್ನೂರು, ಅ.9-ಮಹಮ್ಮದ್ ಪೈಗಂಬರ್ ಜನ್ಮ ದಿನ (ಈದ್ ಮಿಲಾದ್) ಅಂಗವಾಗಿ ಸಮಾಜದ ಯುವಕರು ಆರೋಗ್ಯ ಇಲಾಖೆ ಸಹಯೋಗದಲ್ಲಿ ನಾಡಿದ್ದು ದಿನಾಂಕ 11ರ ಸೋಮವಾರ ಬೆಳಿಗ್ಗೆ 10.30 ರಿಂದ ಸಂಜೆ 5 ರವರೆಗೆ ಪಟ್ಟಣದ ಸುನ್ನೀ ಜಾಮೀಯಾ ಶಾದಿ ಮಹಲ್‌ನಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಂಡಿದ್ದಾರೆ ಎಂದು ಪುರಸಭೆ ಮಾಜಿ ಸದಸ್ಯ ಎ. ಆರೀಫ್ ಅಲಿ ತಿಳಿಸಿದ್ದಾರೆ.

# ಹುಟ್ಟೂರಿನ ಬಡ ಮಕ್ಕಳಿಗೆ ಮಾರ್ಗದರ್ಶಕರಾಗಿ



**ಮಾಯಕೊಂಡದ ದಾವಣಗೆರೆ ನಿವಾಸಿಗಳ ಸಾಂಸ್ಕೃತಿಕ ಹಾಗೂ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟಿಸಿದ ಡಾ.ಎಂ.ಕೆ ರಮೇಶ್**

ದಾವಣಗೆರೆ, ಅ.9- ಮಾಯಕೊಂಡ ಭಾವೈಕ್ಯತೆಯ ಆಗರವಾಗಿತ್ತು. ವಿವಿಧ ಬಗೆಯ ಜಾತಿ, ಧರ್ಮದ ಜನರಿದ್ದರೂ ಭಾವೈಕ್ಯತೆಗೆ ಎಂದೂ ಧಕ್ಕೆ ಬಂದಿರಲಿಲ್ಲ ಎಂದು ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮಂಡಳಿ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಡಾ.ಎಂ.ಕೆ ರಮೇಶ್ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಶನಿವಾರ ಮಾಯಕೊಂಡದ ದಾವಣಗೆರೆ ನಿವಾಸಿಗಳ ಸಾಂಸ್ಕೃತಿಕ ಹಾಗೂ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ ಹಾಗೂ ಸನ್ಮಾನ ಸಮಾರಂಭದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಾಯಕೊಂಡದಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತು. ಸಾಂಸ್ಕೃತಿಕ ವಾತಾವರಣ ವಿತ್ತು. ಭಾವೈಕ್ಯತೆ ಇದ್ದ ಗ್ರಾಮದಲ್ಲಿ ಬೆಳೆದಿದ್ದ ರಿಂದಲೇ ತಮ್ಮ ಓದು ಹಾಗೂ ಕರ್ತವ್ಯದ ದಿನಗಳಲ್ಲಿ ಎಲ್ಲರೊಂದಿಗೂ ಬೆರೆತು ಮುಂದೆ ಬರಲು ಸಾಧ್ಯವಾಯಿತು ಎಂದು ಹೇಳಿದರು.

ಬದಲಾವಣೆ ಜಗದ ನಿಯಮ ಎಂಬಂತೆ ಇತ್ತೀಚಿನ ದಿನಗಳಲ್ಲಿ ಮೊಬೈಲ್, ಟಿವಿಗಳ ಹಾವಳಿಯಿಂದ ಗ್ರಾಮದ ಜನರ ಅಭಿರುಚಿಯೂ ಬದಲಾವಣೆಯಾಗಿದೆ. ಗ್ರಾಮದ ಪ್ರಾಕೃತಿಕ ಬದಲಾವಣೆ, ಜನತೆಯ ಮಾನಸಿಕ ಸ್ಥಿತಿಯ ಬದಲಾವಣೆಗಳೂ ನಡೆದಿವೆ. ವ್ಯವಹಾರಿಕತೆ ಹೆಚ್ಚಾಗಿದೆ. ಅದನ್ನು ಉಳಿಸಿಕೊಂಡು ಸಾಮರಸ್ಯ ಕಾಪಾಡುತ್ತಾ ಸಾಗಬೇಕಿದೆ ಎಂದು ಹೇಳಿದರು.

ಗ್ರಾಮದಲ್ಲಿ ಅನೇಕ ಬಡ ಮಕ್ಕಳಿದ್ದಾರೆ. ಪ್ರಸ್ತುತ ಬೇರೆ ಬೇರೆ ಕಡೆ ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಂಡವರು ಗ್ರಾಮದ ಬಡ ಮಕ್ಕಳಿಗೆ ಸ್ಪಂದಿಸಬೇಕು. ಮಾರ್ಗದರ್ಶನ ನೀಡಬೇಕು. ಕೆಳ ಹಂತದಲ್ಲಿರುವವರನ್ನು ಮೇಲೆತ್ತುವ ಕೆಲಸ ಮಾಡಬೇಕು. ಮನಸ್ಸು ಮಾಡಿದರೆ ಇದು ದೊಡ್ಡ ಕೆಲಸವೇನಲ್ಲ. ಆಗ ಸಂಘ ಮತ್ತಷ್ಟು ಪ್ರಬಲವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಊರಿಗೊಂದು ದಿಕ್ಕು ತೋರಿಸಿದಂತಾಗುತ್ತದೆ ಎಂದು ಸಲಹೆ ನೀಡುತ್ತಾ, ತಾವೂ ಸಹ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಹೇಳಿದರು.

ಸಂಘದ ಅಧ್ಯಕ್ಷರಾದ ಆರ್.ನಾಗರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಂಡಿ ಶರಣಪ್ಪ, ಹೆಚ್.ಎನ್. ಮೂರ್ತಿ, ಜಿ. ಮಲ್ಲಿಕಾರ್ಜುನಪ್ಪ, ಜೆ.ಮಲ್ಲಿಸ್ವಾಮಿ, ಜಿ. ರಾಜಶೇಖರಪ್ಪ, ಬಿ. ಬೀರಲಿಂಗಪ್ಪ, ಹೆಚ್.ಕೆ. ಬಸವರಾಜ್, ಮಂಜುನಾಥ ಕುರ್ಕಿ, ಬಿ.ವಾಮದೇವಪ್ಪ ಇತರರು ಉಪಸ್ಥಿತರಿದ್ದರು. ಬಿ.ಆರ್. ತಿಪ್ಪೇಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಬಾಲ್ಯವಿವಾಹ ತಡೆಯುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು: ನ್ಯಾ. ನಿವೇದಿತಾ



ದಾವಣಗೆರೆ, ಅ. 9- ಸಮಾಜದಲ್ಲಿ ಪಿಡುಗಾಗಿರುವ ಬಾಲ್ಯ ವಿವಾಹ ಹಾಗೂ ಬಾಲ ಕಾರ್ಮಿಕ ಪದ್ಧತಿಗಳನ್ನು ತಡೆ ಗಟ್ಟುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ಬಾಲ ನ್ಯಾಯಮಂಡಳಿ ಅಧ್ಯಕ್ಷರು ಹಾಗೂ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ನಿವೇದಿತಾ ಟಿ.ಎಂ. ಹೇಳಿದರು.

75 ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಸಖಿ ಒನ್ ಸ್ಟಾಪ್ ಸೆಂಟರ್ ವತಿಯಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ಬಾಲಕಾರ್ಮಿಕ ನಿಷೇಧ ಕಾಯ್ದೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಪೋಕ್ಸೋ, ಬಾಲ್ಯ ವಿವಾಹ ಹಾಗೂ ಬಾಲಕಾರ್ಮಿಕ ಪ್ರಕರಣಗಳು ಹೆಚ್ಚು ಹೆಚ್ಚು ವರದಿಯಾಗುತ್ತಿವೆ. ಇವುಗಳನ್ನು ತಡೆಗಟ್ಟುವುದು ಅಗತ್ಯವಾಗಿದ್ದು, ಇದರಲ್ಲಿ ಶಿಕ್ಷಕರ ಪಾತ್ರ ತುಂಬಾ ಪ್ರಮುಖವಾಗಿರುತ್ತದೆ. ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷಕ ಯಾವುದೇ ಮಾಹಿತಿ ದೊರೆತ ಕೂಡಲೇ, ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್ ನಾಯಕ್ ಮಾತನಾಡಿ, ಬಾಲ್ಯವಿವಾಹಗಳು ಪುರಾತನ ಕಾಲದಿಂದಲೂ ನಡೆಯುತ್ತಿದ್ದು, ಅಂತಹ ಬಾಲ್ಯವಿವಾಹಗಳಿಂದ ಅನೇಕ ತೊಂದರೆ ಗಳು ಕಂಡುಬರುತ್ತಿವೆ.

ಮೊದಲಿನಿಂದಲೂ ಇಂತಹದ್ದನ್ನು ಅನೇಕರು ವಿರೋಧಿಸುತ್ತಲೇ ಬಂದಿರುತ್ತಾರೆ. ಆದರೂ ಕೂಡ ಬಾಲ್ಯವಿವಾಹಗಳನ್ನು ತಡೆಯುವಲ್ಲಿ ಪ್ರಯತ್ನಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಂಡಿಲ್ಲ. ಹೀಗಾಗಿ ಕೇಂದ್ರ ಸರ್ಕಾರವು 2006 ರಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಜಾರಿಗೆ ತಂದು, ಕಾಯ್ದೆಯಲ್ಲಿ ಬಾಲ್ಯವಿವಾಹ ಮಾಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಉಲ್ಲೇಖಿಸಲಾಗಿದೆ. ಈ ಕಾನೂನನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕಾದಲ್ಲಿ ಬಾಲ್ಯವಿವಾಹ ಪ್ರಕರಣಗಳ ಮಾಹಿತಿ ಸರಿಯಾದ ಸಮಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿದಲ್ಲಿ ಮಾತ್ರ ಸಾಕಾರವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಹೆಚ್. ವಿಜಯಕುಮಾರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ.ಬಸವರಾಜು, ಸಾಂಸ್ಥಿಕ ಮಕ್ಕಳ ರಕ್ಷಣಾಧಿಕಾರಿ ಕಿರಣ್‌ಕುಮಾರ್ ಮತ್ತಿತರೆ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಂಗವಾಗಿ ಆರ್.ಎಲ್. ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಬಸವನಗೌಡ ಪಾಟೀಲ್ ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಹಾಗೂ ವಿದ್ಯಾಧರ ವೇದವರ್ಮ ಅವರು ಬಾಲಕಾರ್ಮಿಕ ನಿಷೇಧ ಕಾಯ್ದೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

# ಈದ್-ಮಿಲಾದ್‌ಗೆ ಅವಕಾಶ ಕೊಡಿ



**(1ನೇ ಪುಟದಿಂದ)** ಉಪಸ್ಥಿತರಿದ್ದ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಮಾತನಾಡಿ, ಈದ್-ಮಿಲಾದ್ ಹಬ್ಬ ಆಚರಣೆಗೆ ತಾವು ಸಹಕರಿಸುವುದಾಗಿ ಹೇಳಿದರು.

# ನೈಜ ಫಲಾನುಭವಿಗಳಿಗೆ ದೂಡಾ ನಿವೇಶನ ಹಂಚಿಕೆಯಾಗಬೇಕು

ದಾವಣಗೆರೆ, ಅ.8- ರಾಜಕೀಯವನ್ನು ಲಾಭಕ್ಕೆ ಬಳಸಿಕೊಳ್ಳದೇ ನೈಜ ಫಲಾನುಭವಿಗಳಿಗೆ ದೂಡಾ ನಿವೇಶನ ಹಂಚಿಕೆ ಮಾಡಬೇಕು ಎಂದು ಇಂಡಿಯನ್ ನ್ಯೂ ಕಾಂಗ್ರೆಸ್ ಪಕ್ಷ ಒತ್ತಾಯಿಸಿದೆ.

ಸುಮಾರು 25 ವರ್ಷಗಳಿಂದ ದೂಡಾ ನಿವೇಶನಕ್ಕೆ ಅರ್ಜಿ ಆಹ್ವಾನಿಸಿದ ಎಲ್ಲ ಸಂದರ್ಭಗಳಲ್ಲೂ ಅರ್ಹ ಫಲಾನುಭವಿಗಳು ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂದು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಮುದ್ದಾಪುರ ರೆಹಮಾನ್ ಆರೋಪಿಸಿದರು.

ಇತ್ತೀಚೆಗೆ ಪುನಃ ನಿವೇಶನ ರಹಿತರಿಂದ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅರ್ಜಿ ಆಹ್ವಾನಿಸಲಾಗಿದೆ. ಇದು ಕೇವಲ ನಿವೇಶನಗಳನ್ನು ತೋರಿಸಿ, ಮತ ಪಡೆಯುವ ರಾಜಕೀಯ ತಂತ್ರವಾಗಬಾರದು. ಈಗಲಾದರೂ ಸ್ವಂತ ಸೂರಿಲ್ಲದ ಬಡವರಿಗೆ ಕಡಿಮೆ ದರದಲ್ಲಿ ನಿವೇಶನ ಸಿಗುವಂತಾಗಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಮೌನೇಶ್ವರಚಾರಿ, ಹುಸೇನ್ ಸಾಬ್, ಶಬ್ಬೀರ್ ಸಾಬ್, ಹನುಮಂತಪ್ಪ, ರಾಜಾ ಮಿಯಾಸಾಬ್, ಸೋಡಾ ಘನಿ, ರಾಟೆಮನೆ ರಾಜಾಸಾಬ್, ಖಾಸಿಂ ಸಾಬ್ ಸೇರಿದಂತೆ ಇತರರು ಇದ್ದರು.

## ನವದುರ್ಗೆಯರ ನಾಲ್ಕನೆ ರೂಪ

### ಕೂಷ್ಮಾಂಡ ದೇವಿಗೆ ನಮನ

ನವರಾತ್ರಿಯ ನಾಲ್ಕನೆ ದಿನದಲ್ಲಿ
ನವೋಲ್ಲಾಸದಿ ಪೂಜೆ ಮಾಡೋಣ
ಭುವನಮಂಗಳೆ ಕೂಷ್ಮಾಂಡ ದೇವಿಗೆ
ಭಾವಭಕ್ತಿಯಲಿ ನಮಿಸೋಣ

ಜಗದ ಕತ್ತಲನು ಕಳೆವ ಪ್ರಕಾಶಳು
ನಗುವಿನಿಂದ ಸೃಷ್ಟಿ ಮಾಡುವಳು
ಝಗಝಗಿಸುವ ಸೂರ್ಯನೊಳಿಹಳು
ಜಗ ಬೆಳಗಿಸುವ ಮಹಾಶಕ್ತಳು

ಅಷ್ಟ ಭುಜಗಳಲಿ ಚಕ್ರ ಬಿಲ್ಲು ತ್ರಿಶೂಲ
ಶ್ರೇಷ್ಠ ಗಧಾ ಪದ್ಮ ಬಾಣ ಜಪಮಣಿ
ವಿಶೇಷ ಅಮೃತ ಕಲಶ ಹಿಡಿದಿಹಳು
ದುಷ್ಟ ಸಂಹಾರಿ ಸಿಂಹವಾಹಿನಿಯು

ದಶದಿಕ್ಕುಗಳಿಗೆ ಬೆಳಕನು ಚೆಲ್ಲುತ
ನಶಿಸು ನಮ್ಮೊಳಗಿಹ ಕತ್ತಲನು
ವಿಶೇಷ ಸುಜ್ಞಾನದ ಬೆಳಕನು ನೀಡುತ
ವಿಶ್ವಾಸ ಭಕ್ತಿಯನು ಹೆಚ್ಚಿಸಮ್ಮ

ಶರಣಾಗಿಹೆ ದುರ್ಗಾದೇವಿ ನಿನ್ನಡಿಗೆ
ಪರಮ ಭಯಗಳನು ಪರಿಹರಿಸು
ಸಿರಿಹರಿ ಸೋದರಿ ಕರುಣಾಮಯಿಯೆ
ಪರಿಪೂರ್ಣಳೆ ತಾಯೆ ಅನುಗ್ರಹಿಸು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# 'ನ್ಯಾ.ಸದಾಶಿವ' ಆಯೋಗದ ವರದಿಯಿಂದ ಅನ್ಯಾಯವಾಗದು

**ಹಡಗಲಿಯಲ್ಲಿ ಸಫಾಯಿ ಕರ್ಮಚಾರಿ ನಿಗಮದ ಅಧ್ಯಕ್ಷ ಹೆಚ್. ಹನುಮಂತಪ್ಪ**

ಹೂವಿನಹಡಗಲಿ, ಅ. 9- ನ್ಯಾಯ ಮೂರ್ತಿ ಸದಾಶಿವ ಆಯೋಗದ ವರದಿಯನ್ನು ಸರ್ಕಾರ ಜಾರಿ ಮಾಡಿದರೆ, ಯಾವುದೇ ಪರಿಶಿಷ್ಟ ಜಾತಿ ಮತ್ತು ಉಪ ಜಾತಿಗಳಿಗೆ ಖಂಡಿತಾ ಅನ್ಯಾಯವಾಗುವುದಿಲ್ಲ ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ನಿಗಮದ ಅಧ್ಯಕ್ಷ ಹೆಚ್. ಹನುಮಂತಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2013 ರಲ್ಲಿ ಸಫಾಯಿ ಕರ್ಮಚಾರಿಗಳ ಜನಗಣತಿ ನಡೆದಿದ್ದು, ಈಗ ಮತ್ತೊಮ್ಮೆ ಜನಗಣತಿ ಮಾಡುವ ಉದ್ದೇಶದಿಂದ ಸರ್ಕಾರದ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಲಾಗಿದೆ. ಅಗತ್ಯವಾದ ಪ್ರಸ್ತಾವನೆ ಸಿದ್ದವಿದ್ದರೂ ಅನುದಾನದ ಕೊರತೆಯಿಂದ ವಿಳಂಬವಾಗುತ್ತಿದೆ ಎಂದು ಹನುಮಂತಪ್ಪ ವಿವರಿಸಿದರು.

ಹಡಗಲಿಯ 25 ಜನ ಪೌರ ಕಾರ್ಮಿಕರಿಗೆ ನೇರ ಸಾಲ ಮಂಜೂರಾಗಿದ್ದು, ಮೂರು ಜನರಿಗೆ ಐರಾವತ ಯೋಜನೆಯ ಅಡಿಯಲ್ಲಿ ಟ್ಯಾಕ್ಸಿ ಮಂಜೂರು ಮಾಡಲಾಗಿದೆ. ಮುಂದಿನ ತಿಂಗಳು 2.5ಕೋಟಿ ವೆಚ್ಚದಲ್ಲಿ ಸಫಾಯಿ ಕರ್ಮಚಾರಿಗಳ ಕಾಲೋನಿಯಲ್ಲಿ ಮೂಲ ಭೂತ ಸೌಕರ್ಯಗಳ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಅದೇ ರೀತಿ ಹಗರಿಬೊಮ್ಮನಹಳ್ಳಿ, ಕೂಡ್ಲಿಗಿಯಲ್ಲಿಯೂ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ನಗರಸಭೆ, ನಗರ ಪಾಲಿಕೆ, ಪುರಸಭೆ, ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿಯೂ ನಿಗಮದಿಂದ ಯೋಜನೆಗಳನ್ನು ಅನುಷ್ಠಾನ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಹೆಚ್.ಹನುಮಂತಪ್ಪ ತಿಳಿಸಿದರು.

ಈ ಸಂದರ್ಭದಲ್ಲಿ ದಲಿತ ಮುಖಂಡರಾದ ಹೆಚ್.ಪೂಜಪ್ಪ, ಕೆ.ಉಚ್ಚೆಂಗಪ್ಪ, ಪಿ.ನಿಂಗಪ್ಪ, ವಿಲ್ಸನ್ ಸ್ವಾಮಿ, ಹನುಮಂತಪ್ಪ, ಮಧುನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

# 20ರಂದು ಸರಳ ವಾಲ್ಮೀಕಿ ಜಯಂತಿ : ಜಿಲ್ಲಾಧಿಕಾರಿ



ದಾವಣಗೆರೆ, ಅ.9- ಸರ್ಕಾರದ ಮಾರ್ಗಸೂಚಿ ಯನ್ವಯ ಈ ಬಾರಿಯ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಇದೇ ದಿನಾಂಕ 20 ರಂದು ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಸರಳ ಹಾಗೂ ಶ್ರದ್ಧಾ ಭಕ್ತಿಯಿಂದ ಆಚರಿಸಲಾ ಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಕುರಿತು ನಿನ್ನೆ ಆಯೋಜಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಲ್ಲಾ ಮಹಾನ್ ಚೇತನರ ಆಚರಣೆಯನ್ನು ಕೋವಿಡ್ ಕಾರಣದಿಂದ ಜಿಲ್ಲಾಡಳಿತ ಭವನದಲ್ಲಿಯೇ ಆಚರಿಸಲಾಗುತ್ತಿದೆ. ತುಂಗಭದ್ರಾ ಸಭಾಂಗಣದಲ್ಲಿ ಭಕ್ತಿ ಪೂರ್ವಕವಾಗಿ ಆಚರಿಸುವ ಜೊತೆಗೆ, ವಿಶೇಷ ಚಿಂತಕರಿಂದ ವಾಲ್ಮೀಕಿ ಜೀವನ ಚರಿತ್ರೆಯನ್ನು ಸಮಾಜಕ್ಕೆ ತಿಳಿಸಲಾಗುವುದು ಎಂದರು.

**ಸಾಮೂಹಿಕ ಮೆರವಣಿಗೆ ನಿಷೇಧ:** ಕೋವಿಡ್ ಹಿನ್ನಲೆಯಲ್ಲಿ ಯಾವುದೇ ಸಾಮೂಹಿಕ ಮೆರವಣಿಗೆ ಮಾಡುವಂತಿಲ್ಲ ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದ ಸಮಾಜದ ಮುಖಂಡರಿಗೆ ತಿಳಿಸಿದರು.

ಸಮಾಜದ ಮುಖಂಡರು ಮಾತನಾಡಿ, ಸರ್ಕಾರದ ಆದೇಶವನ್ನು ಪಾಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು, ಸರ್ಕಾರದ ಮಾರ್ಗಸೂಚಿಯಂತೆಯೇ ಕಾರ್ಯಕ್ರಮ ಆಯೋಜಿಸಲು ಸಮ್ಮತಿ ಸೂಚಿಸಿದರು.

ನಿವೃತ್ತ ಉಪನ್ಯಾಸಕ ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಮಹರ್ಷಿ ವಾಲ್ಮೀಕಿ ಒಂದು ಸಮುದಾಯಕ್ಕೆ ಸೀಮಿತರಲ್ಲ. ಅವರ ಜನ್ಮದಿನದ ಆಚರಣೆಯನ್ನು ಎಲ್ಲಾ ಸಮುದಾಯದವರು ಸೇರಿ ಮಾಡಬೇಕು ಎಂದಾಗ, ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಮಹಾನ್ ನಾಯಕರನ್ನು ಒಂದೇ ಸಮುದಾಯಕ್ಕೆ ಸೀಮಿತಗೊಳಿಸದೆ ಆಚರಣೆಯಲ್ಲಿ ಎಲ್ಲರೂ ಪಾಲ್ಗೊಳ್ಳುವಂತಾದರೆ ಸಮಾಜಕ್ಕೆ ಒಳ್ಳೆಯ ಸಂದೇಶ ದೊರಕಲಿದೆ ಎಂದು ಆಶಿಸಿದರು.

ಸಮಾಜದ ಮುಖಂಡ ಆಂಜನೇಯ ಗುರೂಜಿ ಮಾತನಾಡಿ, ಜಿಲ್ಲಾಡಳಿತ ಭವನ ಆವರಣದಲ್ಲಿ ವಾಲ್ಮೀಕಿ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ, ಸಮಾಜದ ಮುಖಂಡರುಗಳಾದ ಶ್ರೀನಿವಾಸ ದಾಸಕರಿಯಪ್ಪ, ಶ್ಯಾಗಲೆ ಮಂಜುನಾಥ್, ಮಲ್ಲಿಕಾರ್ಜುನ, ಅಣಜಿ ಅಂಜನಪ್ಪ, ಹಾಲೇಶಪ್ಪ, ವಿಜಯಲಕ್ಷ್ಮಿ ಮುಂತಾದವರು ಭಾಗವಹಿಸಿದ್ದರು. ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಆನಂದ್, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಡಿವೈಎಸ್‌ಪಿ ಬಸವರಾಜ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಬಡಾವಣೆಗಳಲ್ಲಿನ ವಿದ್ಯುತ್ ಉಪಕರಣ ಕಳವು

ದಾವಣಗೆರೆ, ಅ.9- ಬಡಾವಣೆಗಳಲ್ಲಿ ಅಳವ ಡಿಸಲಾಗಿದ್ದ ಬೆಸ್ಕಾಂಗೆ ಸೇರಿದ 3.6 ಲಕ್ಷ ಮೌಲ್ಯದ ವಿದ್ಯುತ್ ಉಪಕರಣಗಳನ್ನು ಕಳವು ಮಾಡಿರುವ ಘಟನೆ ಇಲ್ಲಿನ ವಿದ್ಯಾ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಗ್ರಾಮೀಣ ಉಪವಿಭಾಗ ಗ್ರಾಮೀಣ ಶಾಖೆ-1 ರಲ್ಲಿ ಬರುವ ಶಾಮನೂರು ಗ್ಲಾಸ್ ಹೌಸ್ ಪಕ್ಕದಲ್ಲಿನ ಲೇಔಟ್ ನಲ್ಲಿ ಸುಮಾರು 4 ಕಿಲೋ ಮೀಟರ್ ನಷ್ಟು 2 ಲಕ್ಷ ಮೌಲ್ಯದ ವಾಹಕ, ಮತ್ತೊಂದು ಲೇಔಟ್ ನಲ್ಲಿ 3 ಕಿಲೋ ಮೀಟರ್ ನಷ್ಟು 1.60 ಲಕ್ಷ ಮೌಲ್ಯದ ವಾಹಕ ಕಳ್ಳತನವಾಗಿದ್ದು, ಈ ಬಗ್ಗೆ ಲೇಔಟ್‌ನ ಗ್ರಾಹಕರ ಪತ್ರ ಮುಖೇನ ಮಾಹಿತಿ ತಿಳಿದು ಬಂದಾಗ ಸದರಿ ಲೇಔಟ್‌ಗಳ ಸ್ಥಳ ಪರಿಶೀಲಿಸಿದಾಗ ಒಟ್ಟು 7 ಕಿಲೋ ಮೀಟರ್ ನಷ್ಟು 3.6 ಲಕ್ಷದ ವಾಹಕ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ ಎಂದು ಬೆಸ್ಕಾಂನ ಸಹಾಯಕ ಇಂಜಿನಿಯರ್ ರಾಘವೇಂದ್ರ ಪ್ರಸಾದ್ ದೂರಿನಲ್ಲಿ ತಿಳಿಸಿದ್ದಾರೆ.

# ಬಲವಾದ ಹೋರಾಟಗಳನ್ನು ಕಟ್ಟಬೇಕು

## ವಿದ್ಯಾರ್ಥಿ ಸಮ್ಮೇಳನದಲ್ಲಿ ಡಾ. ಸುನಿತ್ ಕುಮಾರ್ ಕರೆ




ದಾವಣಗೆರೆ, ಅ.9- ವಿದ್ಯಾರ್ಥಿಗಳು ಪ್ರಶ್ನೆ ಮಾಡದಂತೆ ಶೈಕ್ಷಣಿಕ ಕ್ಷೇತ್ರವನ್ನು, ನಮ್ಮನ್ನಾಳುವ ಸರ್ಕಾರಗಳು ಮಾರ್ಪಾಡು ಮಾಡಿಬಿಟ್ಟಿವೆ. ಇದರ ವಿರುದ್ಧ ನೀವುಗಳೆಲ್ಲರೂ ಮತ್ತೆ ಬಲವಾದ ಹೋರಾಟಗಳನ್ನು ಕಟ್ಟಬೇಕು ಎಂದು ಎಸ್‌ಯುಸಿಐ (ಸಿ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಡಾ. ಸುನಿತ್ ಕುಮಾರ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ರೋಟರಿ ಬಾಲಭವನದಲ್ಲಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ವತಿಯಿಂದ ಈಚೆಗೆ ಏರ್ಪಡಿಸಿದ್ದ 2ನೇ ಜಿಲ್ಲಾ ವಿದ್ಯಾರ್ಥಿ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಬೇಕಾಗಿರುವುದು ಯಾವುದೇ ವಿಷಯವನ್ನು ವಿಮರ್ಶೆ ಮಾಡುವ, ಪ್ರಶ್ನೆ ಮಾಡುವ, ಸತ್ಯ ಹುಡುಕಲು ಸಹಾಯ ಮಾಡುವಂತಹ ವೈಜ್ಞಾನಿಕ, ಪ್ರಜಾತಾಂತ್ರಿಕ, ಧರ್ಮನಿರಪೇಕ್ಷ ಶಿಕ್ಷಣ. ನಮ್ಮ ಜೀವನವನ್ನು ಸುಗಮಗೊಳಿಸಿಕೊಳ್ಳಲು ಜ್ಞಾನ ಅತ್ಯವಶ್ಯಕ ಎಂದು ತಿಳಿಸಿದರು.

ವಿದ್ಯಾರ್ಥಿ ಸಮುದಾಯದ ಮುಂದಿರುವ ಸಮಸ್ಯೆಗಳು ಪರಿಹಾರವಾಗಬೇಕಾದರೆ, ವಿದ್ಯಾರ್ಥಿಗಳು ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಮಾಡುವ ಮನಸ್ಥಿತಿಯ ಕೊರತೆ ಇದೆ. ಧೈರ್ಯವಾಗಿ ಪ್ರಶ್ನೆ ಮಾಡುವ ಮನಸ್ಥಿತಿಯನ್ನು ನಾವೆಲ್ಲರೂ ಬೆಳೆಸಿಕೊಳ್ಳಬೇಕು. ನಮ್ಮ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕೆ ನಾವು ಸಂಘಟನೆ ಮಾಡಿಕೊಳ್ಳಲೇಬೇಕಾದ ಅವಶ್ಯಕತೆಯಿದೆ. ಕ್ರಾಂತಿಕಾರಿಗಳ ವಿಚಾರಗಳನ್ನು ನಾವು ಓದಬೇಕು ಹಾಗೂ ಅವರಂತೆ ನಾವುಗಳು ಕೂಡ ಅನ್ಯಾಯವನ್ನು ಪ್ರಶ್ನಿಸುವ ಮನಸ್ಥಿತಿಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಎಐಡಿಎಸ್‌ಓ ನೂತನ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಎಂ. ಕಿರಣ್, ಕಾರ್ಯದರ್ಶಿಯಾಗಿ ಎನ್. ಪೂಜಾ, ಸೆಕ್ರೆಟರಿಯಟ್ ಸದಸ್ಯರಾಗಿ ಪುಷ್ಪ, ಸುಮನ್, ಅಭಿಷೇಕ್ ಹಾಗೂ ಕಚೇರಿ ಕಾರ್ಯದರ್ಶಿಯಾಗಿ ಕಾವ್ಯ ಆಯ್ಕೆಯಾಗಿದ್ದಾರೆ.

ಎಐಡಿಎಸ್‌ಓ ರಾಜ್ಯಾಧ್ಯಕ್ಷೆ ಕೆ.ಎಸ್. ಅಶ್ವಿನಿ, ಅಧ್ಯಕ್ಷೀಯ ಮಂಡಳಿಯ ಸೌಮ್ಯ, ನಾಗಜ್ಯೋತಿ ಸೇರಿದಂತೆ ಇತರರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

# ರಾಜಕೀಯವಾಗಿ ಬಿಎಸ್‌ವೈ ಮುಗಿಸಲು ಬಿಜೆಪಿ ಹೆಜ್ಜೆ

**ಕಾಂಗ್ರೆಸ್ ಟ್ವೀಟ್**

ಬೆಂಗಳೂರು, ಅ. 9- ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ರಾಜಕೀಯವಾಗಿ ಮುಗಿಸಲು ಬಿಜೆಪಿ ಹೆಜ್ಜೆ ಇಟ್ಟಿದೆ ಎಂದು ಕಾಂಗ್ರೆಸ್ ಹೇಳಿದೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್ ಯಡಿಯೂರಪ್ಪ ನೇತೃತ್ವ ದಲ್ಲಿ ಮುಂದಿನ ಚುನಾವಣೆ ಎಂದ ಬಿಜೆಪಿಗರು, ಈಗ ಬೊಮ್ಮಾಯಿ ಅವರ ನೇತೃತ್ವದಲ್ಲಿ ಎನ್ನುತ್ತಿದ್ದಾರೆ.

ಕಣ್ಣೀರು ಹಾಕಿಸಿ, ಯಡಿಯೂರಪ್ಪ ಅವರ ಅಧಿಕಾರ ಕಿತ್ತುಕೊಂಡ ಬಿಜೆಪಿ, ಈಗ ಅವರ ಆಪ್ತರನ್ನೇ ಟಾರ್ಗೆಟ್ ಮಾಡಿ, ಐಟಿ ದಾಳಿ ಮಾಡಿಸಿದೆ.

ಐಟಿ ದಾಳಿಯು ಯಡಿಯೂರಪ್ಪ ಅವರನ್ನು ರಾಜಕೀಯವಾಗಿ ಸರ್ವನಾಶ ಮಾಡಲು ಬಿಜೆಪಿ ಮತ್ತೊಂದು ಹೆಜ್ಜೆ ಇಟ್ಟಿದೆ ಎಂದು ತಿಳಿಸಿದೆ.

**Shree Sarveshwara Souharda Co-Op. Ltd., Davanagere.**

Reg. No. RG0045210000236/17.09.2021
# 1774/19, 1st Floor, 4th cross, LG Complex, Shamanur Road, Siddaveerappa Layout, Opp. :IDFC Bank, Davanagere.
**Ph. : 91089 23846, 70199 26156**

| | | | |
|---|---|---|---|
| 01) | Manager | 2 Post | Any degree |
| 02) | Accountant | 5 Post | Any degree |
| 03) | Cashier | 2 Post | Any degree |
| 04) | F.D.A. | 3 Post | Any degree |
| 05) | SDA | 2 Post | PUC |
| 06) | Attender | 2 Post | SSLC |
| 07) | Field Officer | 10 Post<br>5 Post | Male any degree<br>Famale any degree |
| 08) | Pigmy Agent | 20 Post | SSLC |

**Interview Date : 10th, 11th, October 2021, Timing 11.00 am**

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಗೂಗಿಮಠ ವಿಶ್ವೇಶ್ವರಯ್ಯ ಬಿನ್ ಶಿವಯ್ಯ, ಹಳ್ಳದ್ ಕೆರೆ ಬೀದಿ, ಲಕ್ಷ್ಮೇಶ್ವರ, ಶಿರಹಟ್ಟಿ ತಾಲ್ಲೂಕು** ಇವರ ಪರವಾಗಿ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ,

**ಶ್ರೀಮತಿ ಜಿ. ಶಾಂತಾಬಾಯಿ ಕೋಂ ಪರಮೇಶ,** ಡೋರ್ ನಂ. 1848/43, ಶ್ರೀ ತಿರುಮಲಾದ್ರಿ, 1ನೇ ಮೇನ್, 3ನೇ ಕ್ರಾಸ್, ವಿನಾಯಕ ಬಡಾವಣೆ ದಾವಣಗೆರೆ ಇವರು ಕೆಳಕಂಡ ಷೆಡ್ಯೂಲ್ ಆಸ್ತಿಯ ಮಾಲೀಕರಿದ್ದು, ಸದರಿಯವರಿಂದ ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಈ ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ನಮ್ಮ ಕಕ್ಷಿದಾರರು ಖರೀದಿಸಲು, ಯಾರದ್ದಾದರೂ ಯಾವುದೇ ರೀತಿಯಿಂದ ತಂಟೆ, ತಕರಾರು, ಅಧಿಕಾರ, ಭಾಗಾಂಶ, ಹಕ್ಕು-ಬಾಧ್ಯತೆಗಳು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಯಾದ 7 ದಿನದೊಳಗಾಗಿ ನಮ್ಮನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ನಮ್ಮ ಕಕ್ಷಿದಾರರು ಷೆಡ್ಯೂಲ್ ಆಸ್ತಿಯನ್ನು ಖರೀದಿಸಿದ ನಂತರ ಯಾವುದೇ ವ್ಯಕ್ತಿಗಳಿಂದ ಯಾವುದೇ ರೀತಿಯಿಂದ ತಂಟೆ, ತಕರಾರು ಬಂದಲ್ಲಿ ನಮ್ಮ ಕಕ್ಷಿದಾರರಿಗೆ ಯಾವುದೇ ರೀತಿಯಿಂದ ಬಾಧಕವಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್ :** ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ಸಿಟಿ ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ (ನಿಟುವಳ್ಳಿ ಗ್ರಾಮದ ಸರ್ವೆ ನಂ. 39/1ಬಿಯಲ್ಲಿ ಅಲಿನೇಷನ್ ಆದ ಪ್ರದೇಶ) ದಲ್ಲಿ ಬರುವ ಸೈಟ್ ನಂ. 42, ಇದರ ಡೋರ್ ನಂ. 1403, ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ. 1403/42, ವಿಸ್ತೀರ್ಣ 40×60 ಅಡಿವುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ. ಪೂರ್ವಕ್ಕೆ : ಸೈಟ್ ನಂ. 43, ಪಶ್ಚಿಮಕ್ಕೆ : ಸೈಟ್ ನಂ. 41 ಉತ್ತರಕ್ಕೆ : ಸೈಟ್ ನಂ. 23, ದಕ್ಷಿಣಕ್ಕೆ : 30 ಅಡಿ ರಸ್ತೆ.

ದಿನಾಂಕ : 09-10-2021
ದಾವಣಗೆರೆ

**ಎ.ಎಂ. ಹಿರೇ ಕೊಟ್ರೇಶ್** ವಕೀಲರು,
ಅಶೋಕ ರಸ್ತೆ, ದಾವಣಗೆರೆ.
ಮೊ. 9448338532

# ವಾರ ಭವಿಷ್ಯ

**ದಿನಾಂಕ : 10.10.2021 ರಿಂದ 16.10.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕೆಲವರೊಂದಿಗೆ ಅತಿಯಾದ ಸ್ನೇಹ ವೃದ್ಧಿಸಲಿದೆ. ಆದರೆ ಅದು ವ್ಯವಹಾರಕ್ಕೆ ಸಂಬಂಧಪಟ್ಟಿದ್ದಲ್ಲಿ ವಿಶ್ವಾಸ ಕೆಡದಂತೆ ಎಚ್ಚರ ವಹಿಸಿ. ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಸಿಗಲಿದೆ, ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂಜರಿಕೆ ಬೇಡ. ಪ್ರಯಾಣ ಕಾಲದಲ್ಲಿ ಪೂರ್ವಸಿದ್ಧತೆ ಉತ್ತಮವಾಗಿರಲಿ. ಮಾಡುವ ಕೆಲಸಗಳಿಗೊಂದು ಕಾಲಮಿತಿಯಿರುವುದು ಲೇಸು. ಸಂಸಾರದಲ್ಲಿ ಮೂಡಿದ್ದ ಬೇಸರ ಕಡಿಮೆಯಾಗಿ ಸಂಗಾತಿಯೊಂದಿಗೆ ಸಾಮರಸ್ಯ ಮೂಡಲಿದೆ. ಮನೆಯಲ್ಲಿ ವಿಶೇಷ ಧಾರ್ಮಿಕ ಕಾರ್ಯಗಳು, ಗುರು ಜಪ ಮಾಡಿ. ಸೋಮ -ಮಂಗಳ -ಗುರು -ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಕೃಷಿಯಲ್ಲಿ ಹೊಸ ವಿಧಾನವನ್ನು ಅಳವಡಿಸಿಕೊಳ್ಳುವ ಯತ್ನದಲ್ಲಿ ಯಶಸ್ವಿಯಾಗುವಿರಿ. ವಾಹನಗಳನ್ನು ಖರೀದಿಸುವ ಮುನ್ನ ದಾಖಲೆಗಳನ್ನು ಪರಿಶೀಲಿಸಿ, ನಿಮ್ಮ ಅನಿರೀಕ್ಷಿತ ನಡಾವಳಿಯಿಂದಾಗಿ ಮನೆ ಸದಸ್ಯರಿಗೆ ಅಸಹನೆ ಮೂಡಲಿದೆ. ಪದೇ ಪದೇ ನಿರ್ಧಾರಗಳನ್ನು ಬದಲಿಸುವುದರಿಂದ, ಯಾರೂ ಕೂಡ ನಿಮ್ಮನ್ನು ನಂಬದೇ ಹೋಗಬಹುದು. ಷೇರು ಮತ್ತು ಏಜೆನ್ಸಿಗಳನ್ನು ನಡೆಸುವವರಿಗೆ ದಿನೇ ದಿನೇ ಅಭಿವೃದ್ಧಿ, ಸೋದರಿಯ ಕೌಟುಂಬಿಕ ಸಮಸ್ಯೆಗಳು ನಿಮ್ಮ ಮಧ್ಯಸ್ಥಿಕೆಯಲ್ಲಿ ಬಗೆಹರಿಯಲಿವೆ. ಹಿರಿಯರ ಆರೋಗ್ಯದ ಬಗೆ ಹೆಚ್ಚಿನ ಕಾಳಜಿ ವಹಿಸುವುದು ಉತ್ತಮ. ರಾಜಕಾರಣಿಗಳು ತಮ್ಮ ಹಿಂಬಾಲಕರ ವಿಷಯದಲ್ಲಿ ಸಾಕಷ್ಟು ಎಚ್ಚರದಿಂದಿರುವುದು ಒಳ್ಳೆಯದು, ಗುರು -ಶುಕ್ರ -ಶನಿ -ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಅತಿಮುಖ್ಯವಾದ ಕೆಲಸಗಳ ಕಡೆ ಹೆಚ್ಚಿನ ಗಮನ ಹರಿಸಿ, ಕೆಲವು ಘಟನೆಗಳಿಂದಾಗಿ ಮಾಡಲೇ ಬೇಕಾಗಿದ್ದ ಪ್ರಯಾಣವು ಮುಂದೆ ಹೋಗಬಹುದು, ಹಣಕಾಸಿನ ಮೂಲದಲ್ಲಿ ಮಂದಗತಿ ಕಂಡರೂ ವಾರದ ಮಧ್ಯದಲ್ಲಿ ಸರಿಹೋಗಲಿದೆ. ವ್ಯವಹಾರಸ್ಥರು ಸದ್ಯದ ಪರಿಸ್ಥಿತಿಯಲ್ಲಿ ಹಣಕಾಸಿನ ವ್ಯವಹಾರ ಕಡಿಮೆ ಮಾಡುವುದು ಉತ್ತಮ. ವ್ಯಾಪಾರ, ವ್ಯವಹಾರಗಳಲ್ಲಿ ಕ್ರಮೇಣ ಏರಿಕೆ, ವೈಯುಕ್ತಿಕ ಆರೋಗ್ಯದಲ್ಲಿ ಅಲ್ಪಸ್ವಲ್ಪ ಏರುಪೇರು ಕಾಣಲಿದೆ. ಹಾಗೆಂದ ಮಾತ್ರಕ್ಕೆ ಉದಾಸಿನ ಸಲ್ಲದು. ಆದಾಯ ಮೂಲದಲ್ಲಿ ಹೆಚ್ಚಳ, ಆರ್ಥಿಕವಾಗಿ ಸಬಲರಾಗುವಿರಿ. ಪ್ರಮುಖ ನಿರ್ಧಾರಗಳನ್ನು ವಾರದ ಮಟ್ಟಿಗೆ ಮುಂದೂಡಿ. ಕುಲದೇವತಾರಾಧನೆ ಮಾಡಿ. ಭಾನು -ಬುಧ -ಶುಕ್ರ -ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ನೀವು ಖಾಸಗಿ ಕಂಪನಿಯಲ್ಲಿ ನೌಕರರಾಗಿದ್ದಲ್ಲಿ ನಿಮ್ಮ ಸಹೋದ್ಯೋಗಿಗಳೊಂದಿಗೆ ಸಹಕರಿಸಿ, ತಿಳಿದೂ ತಿಳಿಯದಂತಿರಿ, ಸ್ನೇಹಿತರ ವಾಗ್ವಾದಗಳಿಗೆ ಸಮಾಧಾನದಿಂದ ಉತ್ತರಿಸಿ. ವಾಹನದಲ್ಲಿ ಎಚ್ಚರದಿಂದಿರಿ. ಕಾರ್ಖಾನೆಗಳಲ್ಲಿ ನೌಕರರ ಪರಿಶ್ರಮಕ್ಕೆ ತಕ್ಕ ಪ್ರತಿಫಲ, ಮಹಿಳೆಯರಾಡುವ ಉದ್ವೇಗದ ಮಾತುಗಳಿಂದಾಗಿ ಅನಾಹುತವೇ ನಡೆಯುವ ಸಂಭವವಿದೆ. ಸಾಧ್ಯವಾದಷ್ಟು ಇದನ್ನು ತಡೆಯಲು ಯತ್ನಿಸುವುದು, ಉನ್ನತಾಧ್ಯಯನಕ್ಕೆಂದು ವಿದೇಶಕ್ಕೆ ಹೋಗಲಿರುವ ವಿದ್ಯಾರ್ಥಿಗಳಿಗೆ ಸಕಲ ರೀತಿಯಲ್ಲಿ ನೆರವು, ಆದಾಯ ಹೆಚ್ಚಿತೆಂದು ಅನಾವಶ್ಯಕ ವಸ್ತುಗಳನ್ನು ಖರೀದಿಸಲು ಹೋಗಬೇಡಿ. ಬಾಕಿ ಸಾಲಗಳು ಇಷ್ಟರಲ್ಲೇ ಕೈ ಸೇರಲಿವೆ. ಅನ್ನದಾನ ಮಾಡಿ. ಸೋಮ - ಮಂಗಳ - ಗುರು - ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಪ್ರೇಮಿಗಳು ತಮ್ಮ ಮನಸ್ಸಿನಲ್ಲಿ ಹರಿಯುವ ಹುಚ್ಚಾಟಕ್ಕೊಂದು ಕಡಿವಾಣ ಹಾಕಿ, ಹೊಸ ಸ್ನೇಹಿತನಿಂದ ನಿಮಗೆ ಉತ್ತಮ ಸಲಹೆಗಳು ಸಿಗಲಿವೆ. ವಿದ್ಯಾರ್ಥಿಗಳು ಕಠಿಣ ಪರಿಶ್ರಮಪಟ್ಟಲ್ಲಿ ಮಾತ್ರ ಉತ್ತಮ ಫಲಿತಾಂಶ, ಉದ್ಯೋಗಾಕಾಂಕ್ಷಿಗಳಾದ ಪದವೀಧರರಿಗೆ ಕೆಲಸದ ಬಗ್ಗೆ ರಾಜಕಾರಣಿಗಳಿಂದ ಕೇವಲ ಭರವಸೆ ಮಾತ್ರ, ಅತಿಥಿಗಳಿಂದಾಗಿ ಮನೆಯಲ್ಲಿ ಹಬ್ಬದ ವಾತಾವರಣ, ಆದಾಯದ ಮೂಲದಲ್ಲಿ ಹೆಚ್ಚಳ, ಪ್ರಾಚೀನ ವಸ್ತುಗಳ ಮಾರಾಟದಿಂದ ಗಳಿಕೆ, ಸರ್ಕಾರಿ ನೌಕರರಿಗೆ ಕರ್ತವ್ಯದಲ್ಲಿ ತುಂಬಾ ಅಡಚಣೆಗಳು ಸಾಕಷ್ಟು ಜಾಗ್ರತೆಯಿಂದಿರಿ, ವಾಹನ ಖರೀದಿ ಸದ್ಯಕ್ಕೆ ಬೇಡ, ಅವಿವಾಹಿತರಿಗೆ ಕಂಕಣಬಲ ಇಷ್ಟರಲ್ಲೇ ಕೂಡಿ ಬರಲಿದೆ. ಭಾನು -ಸೋಮ -ಬುಧ -ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಹಿರಿಯರ ಮನಸ್ಸಿಗೆ ನೆಮ್ಮದಿ ತರುವ ಸಂತಸದ ಸುದ್ದಿ ಕೇಳಿಬರಲಿದೆ. ಧಾರ್ಮಿಕ ಕಾರ್ಯಗಳಲ್ಲಿ ಶ್ರದ್ಧೆಯಿಂದ ಭಾಗವಹಿಸಿರಿ. ಮಡದಿ, ಮಕ್ಕಳ ಸಂತೋಷಕ್ಕಾದರೂ ನೀವು ಪ್ರಯಾಣ ಮಾಡಲೇಬೇಕಾಗಬಹುದು. ಆದಾಯದ ಹೆಚ್ಚಳಕ್ಕೊಂದು ಹೊಸಮಾರ್ಗ ತೋರಲಿದೆ. ದಿನಸಿ ವ್ಯಾಪಾರಿಗಳಿಗೆ ಲಾಭ, ನಿಮ್ಮ ಮನಸ್ಸಿನ ಕೋರಿಕೆಗಳು ಈಡೇರುವ ಸಮಯ ಬರಲಿದೆ. ವಿದ್ಯಾವಂತರಿಗೆ ಹೆಚ್ಚಿನ ಅವಕಾಶಗಳು ಬರಲಿವೆ. ಪ್ರೇಮಿಗಳ ಪಾಲಿಗೆ ಈ ವಾರ ಅತ್ಯಂತ ಮಹತ್ತರದ ಬೆಳವಣಿಗೆಯಾಗಲಿದೆ. ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ ವೃದ್ಧಿಸಲಿದೆ. ಮಹಿಳೆಯರು ತಮ್ಮ ಬಾಳ ಸಂಗಾತಿಯ ಔದ್ಯೋಗಿಕ ಪದೋನ್ನತಿಯನ್ನು ನಿರೀಕ್ಷಿಸಬಹುದು. ಪ್ರಯಾಣ ಅನಿವಾರ್ಯವಾಗಲಿದೆ, ತುಸು ತಾಳ್ಮೆಯಿಂದ ವ್ಯವಹರಿಸಿ. ಮಂಗಳ -ಬುಧ -ಗುರು – ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಮಹಿಳಾ ಉದ್ಯೋಗಾಕಾಂಕ್ಷಿಗಳಿಗೆ ನೇಮಕಾತಿ ಆದೇಶ ಪತ್ರ ಕೈಸೇರಲಿದೆ. ಸದ್ಯಕ್ಕೆ ಅಲ್ಲಿಯೇ ಮುಂದುವರೆಯುವುದು ಉತ್ತಮ. ಅಧಿಕಾರಿಗಳ ಔದಾರ್ಯದಿಂದಾಗಿ ಉದ್ಯೋಗದಲ್ಲಿ ಬಂದಿರುವ ಕಂಟಕಗಳು ದೂರವಾಗಲಿವೆ. ಸಾಲ ಕೊಟ್ಟವರು ಮರು ಪಾವತಿಗೆ ಒತ್ತಡ ಹಾಕುವರು, ಅವರೊಂದಿಗೆ ಉಪಾಯದಿಂದ ಕೆಲಕಾಲ ವಾಯಿದೆ ಪಡೆಯಿರಿ. ದುಡುಕಿನ ನಿರ್ಧಾರಗಳನ್ನು ತೆಗೆದುಕೊಳ್ಳಬೇಡಿ, ಸಂಗಾತಿಯ ಸಲಹೆ ಪಡೆದು ಮುನ್ನಡೆಯಿರಿ. ಮತ್ತೊಬ್ಬರ ಬಗ್ಗೆ ಅಸಹನೆ ತೋರುವುದರಿಂದ ಏನೂ ಪ್ರಯೋಜನವಿಲ್ಲ. ವಾರಾಂತ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಪರೋಪಕಾರ ಮಾಡಿ. ಬುಧ -ಗುರು-ಶುಕ್ರ -ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ನಿಮ್ಮ ಆಲೋಚನಾ ಶೈಲಿ ಈಗಿನ ಕಾಲಕ್ಕೆ ಸರಿಹೊಂದದೇ ಹೋಗಬಹುದಾದ್ದರಿಂದ ಈ ವಿಷಯದಲ್ಲಿ, ಅನುಭವಿಗಳಾದವರ ಮಾತನ್ನು ಕೇಳುವುದು ಲೇಸು. ಮಕ್ಕಳ ವಿಷಯದಲ್ಲಿ ಆತಂಕ ಮಾತ್ರಕ್ಕೆ ನಿರಾಸೆಬೇಡ. ಮಡದಿಯ ಆರೋಗ್ಯದಲ್ಲಿ ಸುಧಾರಣೆ, ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡವರಿಗೆ ವಿಶೇಷ ಸನ್ಮಾನ. ಹೈನುಗಾರಿಕೆ ನಡೆಸುವ ರೈತಾಪಿ ಮಿತ್ರರಿಗೆ ಹೆಚ್ಚಿನ ಲಾಭ, ಹಿರಿಯರ ಬೆಂಬಲವಿರುವ ನಿಮಗೆ, ರಾಜಕಾರಣದಲ್ಲಿ ಉತ್ತಮ ಸ್ಥಾನಮಾನ ದೊರೆಯಲಿದೆ.ಮತ್ತೊಬ್ಬರ ಹಣಕಾಸಿನ ವ್ಯವಹಾರದಲ್ಲಿ ನೀವು ಮಧ್ಯಸ್ಥರಾಗಬೇಡಿ. ಇಲ್ಲವಾದಲ್ಲಿ ಮುಂದೆ ನೀವೇ ಅದಕ್ಕೆ ಹೊಣೆಗಾರರಾಗುವಿರಿ. ವಾಹನಗಳನ್ನು ವೇಗವಾಗಿ ಚಾಲಿಸಲು ಹೋಗಬೇಡಿ. ಪ್ರಯಾಣ ಸದ್ಯಕ್ಕೆ ಬೇಡ. ಭಾನು, ಮಂಗಳ, ಬುಧ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಖಾಸಗಿ ಕಂಪನಿಯಲ್ಲಿ ನೌಕರಿ ಮಾಡುವವರಿಗೆ ಪದೋನ್ನತಿ, ವೇತನದಲ್ಲಿ ಹೆಚ್ಚಳ, ರಾಜಕಾರಣದಲ್ಲಿ ಎಚ್ಚರದಿಂದ ಹೆಜ್ಜೆಯಿಡುವುದು ಲೇಸು. ಬೇರೆಯವರ ಸತ್ಯವನ್ನು ಬಯಲು ಮಾಡಲು ಹೋಗಿ, ನೀವೇ ಅವರ ಮುಂದೆ ಅವಮಾನಿತರಾಗುವಿರಿ. ವಾಹನ ಖರೀದಿ ಯೋಗವಿದೆ, ಹಿರಿಯರ ಸಲಹೆಯಂತೆ ನಡೆದಲ್ಲಿ ನಿಮ್ಮ ಘನತೆ ಹೆಚ್ಚುವುದು. ಕುಟುಂಬದ ಸದಸ್ಯರ ಅಸಹನೆಯನ್ನು ಸಹನೆಯಿಂದ ಸಹಿಸಿರಿ. ವಿದೇಶದಲ್ಲಿ ಓದುತ್ತಿರುವವರಿಗೆ ಅಧ್ಯಯನದಲ್ಲಿ ಏಕಾಗ್ರತೆ ಕಡಿಮೆಯಾಗಲಿದೆ. ಬದಲಾವಣೆಗೆ ತಕ್ಕಂತೆ ಹೊಂದಿಕೊಳ್ಳಲು ಪ್ರಯತ್ನಿಸಿ. ಸೋಮ -ಗುರು -ಶುಕ್ರ -ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕೈಗಾರಿಕೊದ್ಯಮಿಗಳಿಗೆ, ಪಾಲುದಾರರ ನಡುವೆ ಭಿನ್ನಾಭಿಪ್ರಾಯ, ಹಿಡಿದ ಕಾರ್ಯಗಳಲ್ಲಿ ಯಶಸ್ಸನ್ನು ಬಯಸುವ ನಿಮಗೆ ಅತಿಯಾದ ಅಲೆದಾಟ ಅನಿವಾರ್ಯ, ಹೋಟೆಲ್ ಉದ್ಯಮದಲ್ಲಿ ಕ್ರಮೇಣ ಚೇತರಿಕೆ, ಸಂಬಂಧಪಡದ ವಿಷಯದಲ್ಲಿ ಪ್ರವೇಶಿಸಲು ಹೋಗಬೇಡಿ, ವೈಯಕ್ತಿಕ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಲಿದ್ದು, ಅದು ನಿಮ್ಮಲ್ಲಿ ಹೊಸ ಚೈತನ್ಯ ಮೂಡಿಸಲಿದೆ. ಮತ್ತೊಬ್ಬರನ್ನು ಅತಿಯಾಗಿ ಅವಲಂಬಿಸುವುದನ್ನು ಕಡಿಮೆ ಮಾಡಿದಷ್ಟೂ ನಿಮಗೇ ಒಳ್ಳೆಯದು, ನವದಂಪತಿಗಳು ಹೊಂದಾಣಿಕೆ ಮನೋಭಾವದಿಂದ ಸಂಸಾರ ನಡೆಸುವುದು ಉತ್ತಮ. ವೈದ್ಯರಿಗೆ ಉತ್ತಮ ಆದಾಯವಾಗಲಿದೆ. ಬುಧ – ಗುರು -ಶನಿ -ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಪೂರ್ವಯೋಜಿತ ನಿರ್ಧಾರದಂತೆ ಕೈಗಾರಿಕೆ ಅಥವಾ ಹೊಸ ಉದ್ಯಮಕ್ಕೆ ಈ ವಾರ ಉತ್ತಮ ಚಾಲನೆ, ಕಾನೂನಿನ ತೊಡಕುಗಳು ನಿವಾರಣೆಯಾಗಲಿವೆ. ಅಕ್ಕಿ ವ್ಯಾಪಾರ ಲಾಭದಾಯಕವಲ್ಲದಿದ್ದರೂ, ನಷ್ಟವಂತೂ ಇಲ್ಲ. ಮಕ್ಕಳ ಶೈಕ್ಷಣಿಕ ಪ್ರಗತಿ ಉತ್ತಮವಾಗಲಿದೆ. ಮತ್ತೊಬ್ಬರ ವಿಚಾರದಲ್ಲಿ ಗುಂಪುಗಾರಿಕೆ ಮಾಡಲು ಹೋಗಿ ಧನ, ಮಾನ, ಎರಡನ್ನೂ ಕಳೆದುಕೊಳ್ಳುವಿರಿ. ಸಮಾಜ ಸೇವೆಯಲ್ಲಿ ಸಂತೃಪ್ತಿ ಕಾಣಲು ಯತ್ನಿಸುವಿರಿ. ಆಸ್ತಿಗೆ ಸಂಬಂಧಪಟ್ಟ ವ್ಯಾಜ್ಯವೊಂದು ನಿಮ್ಮಂತೆಯಾಗಲು ಸಾಕಷ್ಟು ಸಮಯ ತೆಗೆದುಕೊಳ್ಳಲಿದೆ. ಆಯ-ವ್ಯಯಗಳು ಸಮವಾಗಿರುವುದರಿಂದ, ಉಳಿತಾಯದ ವಿಷಯವನ್ನು ಕೆಲಕಾಲ ಮರೆಯುವುದು ಉತ್ತಮ. ಆರಕ್ಷಕ ಇಲಾಖೆಯಲ್ಲಿರುವವರಿಗೆ ಮೇಲಾಧಿಕಾರಿಗಳಿಂದ ತೊಂದರೆ. ಗುರು -ಶುಕ್ರ -ಶನಿ -ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನಿಮ್ಮನ್ನು ದ್ವೇಷಿಸಲೆಂದೇ ಬರುವವರು, ಅವರಿಗೇ ತಿಳಿಯದಂತೆ ನಿಮ್ಮ ಮಿತ್ರರಾಗುವರು. ವೃತ್ತಿಯಲ್ಲಿ ಪ್ರತಿ ಹೆಜ್ಜೆಯೂ ಯಶಸ್ಸಿನತ್ತ ಸಾಗಲಿದೆ. ಭೂ ಖರೀದಿ ವಿಚಾರ ಸರಳವಾಗಲಿದೆ. ಹಾಗೆಂದ ಮಾತ್ರಕ್ಕೆ, ಎಲ್ಲರ ಮಾತನ್ನು ನಂಬುವುದು ಮೂರ್ಖತನವಾದೀತು. ಹಿರಿಯರ ಆರೋಗ್ಯ ತುಸು ಸುಧಾರಿಸುವವರೆಗೂ ದೂರ ಪ್ರಯಾಣ ಬೇಡ. ಮಗಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿ, ನೆಮ್ಮದಿಯಾಗಲಿದೆ. ಬಿಡುವಿಲ್ಲದ ಕಾರ್ಯಕ್ರಮಗಳಿಂದಾಗಿ ದೇಹಾಯಾಸವಾದೀತು. ಕಾಲಕಾಲಕ್ಕೆ ತುಸು ವಿಶ್ರಾಂತಿ ಪಡೆಯಿರಿ. ಸಾಧು-ಸಂತರ ದರ್ಶನ ಭಾಗ್ಯವಾಗಲಿದ್ದು, ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಬೇಡಿ. ಮಹಿಳೆಯರಿಗೆ ಉತ್ತಮ ದಿನಗಳು. ಭಾನು -ಸೋಮ -ಗುರು -ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 12.10.2021ರ ಮಂಗಳವಾರ ಮೂಲಾ ನಕ್ಷತ್ರ ಸರಸ್ವತಿ ಆವಾಹನೆ., ದಿನಾಂಕ : 13.10.2021 ಬುಧವಾರ ಸರಸ್ವತಿ ಪೂಜೆ, ದುರ್ಗಾಷ್ಟಮಿ, ದಿನಾಂಕ : 14. 10.2021 ಗುರುವಾರ ಮಹಾನವಮಿ, ಆಯುಧಪೂಜೆ, ದಿನಾಂಕ : 15-10-2021ರ ಶುಕ್ರವಾರ ವಿಜಯ ದಶಮೀ, ಶಮೀಪೂಜೆ, ಮಧ್ವ ಜಯಂತಿ.**

## ದಾವಣಗೆರೆಯಲ್ಲಿ ಬೀದಿಬದಿ ವ್ಯಾಪಾರಿಗಳಿಂದ ಚೌಡೇಶ್ವರಿ ಉತ್ಸವ



ದಾವಣಗೆರೆ, ಅ.9- ನಗರದ ಗಡಿಯಾರ ಕಂಬದ ಹತ್ತಿರವಿರುವ ಶ್ರೀ ಚೌಡೇಶ್ವರಿ ದೇವಿಯ ನವರಾತ್ರಿ ಹಬ್ಬದ ಪ್ರಯುಕ್ತ ಈ ಭಾಗದ ಬೀದಿಬದಿ ವ್ಯಾಪಾರಿಗಳು ಸಡಗರ ಮತ್ತು ಸಂಭ್ರಮದಿಂದ ಉತ್ಸವ ಆಚರಿಸಿದರು.

ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಜಿಲ್ಲಾಧ್ಯಕ್ಷ ಎಸ್.ಹಾಲೇಶಪ್ಪ ಹಾಜರಿದ್ದರು. ಇವರೊಂದಿಗೆ ವ್ಯಾಪಾರಿಗಳಾದ ಆಪಲ್ ಪ್ರಕಾಶ್, ವೀರೇಶ್ ಜೋಗಿ, ಮಂಜು ಶೇಂಗಾ, ದೇವರಾಜ್, ಶಫಿ, ಸೋಡ ಗಣೇಶ್, ಮೈಲಾರಪ್ಪ, ನಾಗರಾಜ್ ಬೇತೂರು, ಲೋಕಣ್ಣ, ವೆಂಕಟೇಶ್, ರಮೇಶ್, ಚಂದ್ರಪ್ಪ, ಕಾಶಿ, ಮಂಜಮ್ಮ ಕೊಂಡಜ್ಜಿ, ನಾಗಮ್ಮ ಹನುಮಜ್ಜಿ, ಮಲ್ಲಮ್ಮ ಸಿದ್ದಮ್ಮ ಶೈಲ ಹಾಗೂ ಇತರೆ ವ್ಯಾಪಾರಿಗಳು ಹಾಜರಿದ್ದರು.

## ಹರಿಹರದಲ್ಲಿ ನಾಳೆ ರೈತರ ಪ್ರತಿಭಟನೆ



ಮಲೇಬೆನ್ನೂರು, ಅ.9- ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಹಾಗೂ ಖರೀದಿ ಕೇಂದ್ರ ತೆರೆಯುವಂತೆ ಒತ್ತಾಯಿಸಿ ಹರಿಹರ ತಾಲ್ಲೂಕಿನ ಎಲ್ಲಾ ರೈತ ಸಂಘಟನೆಗಳ ವತಿಯಿಂದ ನಾಡಿದ್ದು ದಿನಾಂಕ 11 ರ ಸೋಮವಾರ ಹರಿಹರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಕೆ.ಎನ್. ಹಳ್ಳಿ ಪ್ರಭುಗೌಡ ತಿಳಿಸಿದ್ದಾರೆ.

ಕುಂಬಳೂರು ಗ್ರಾಮದಲ್ಲಿ ಇಂದು ಆಯೋಜಿಸಿದ್ದ ರೈತರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಹರಿಹರ ತಾಲ್ಲೂಕಿನ 22 ಗ್ರಾಮಗಳಿಗೆ ಭೇಟಿ ನೀಡಿ ಪ್ರತಿಭಟನೆಗೆ ರೈತರನ್ನು ಆಹ್ವಾನಿಸಲಾಗಿದೆ ಎಂದರು. ಸಿರಿಗೆರೆ ಪಾಲಾಕ್ಷಪ್ಪ ಮಾತನಾಡಿ, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು. ರೈತ ಸಂಘದ ಸಿರಿಗೆರೆಯ ಹಾಳೂರು ನಾಗರಾಜ್, ಭಾನುವಳ್ಳಿ ಪರಮೇಶ್ವರಪ್ಪ, ಹಾಲಿವಾಣದ ಅಂಜಿನಪ್ಪ, ಕುಂಬಳೂರಿನ ಕೆ. ಆಂಜನೇಯ ಸೇರಿದಂತೆ, ಅನೇಕರು ಹಾಜರಿದ್ದರು.

# ಗಿಡಮೂಲಿಕೆ ಅರಳಿ (ಅಶ್ವತ್ಥ)...

ಅರಳಿಯನ್ನು ವೃಕ್ಷಗಳ ರಾಜನೆಂದೂ, ದೇವವೃಕ್ಷವೆಂದೂ ಕರೆಯುತ್ತಾರೆ. ಈ ಮರದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ನೆಲೆಸಿರುತ್ತಾರೆ. ಇದರ ಹೂ, ಎಲೆಗಳಲ್ಲಿ ದೇವತೆಗಳು ವಾಸಿಸುತ್ತಾರೆಂದು ಪುರಾಣಗಳು ಹೇಳುತ್ತವೆ. ಕೃಷ್ಣ 'ಮರಗಳಲ್ಲಿ ನಾನು ಅರಳಿ ಮರವಾಗಿದ್ದೇನೆ' ಎಂದಿದ್ದಾನೆ. ಸ್ಕಂದ ಪುರಾಣಗಳ ಪ್ರಕಾರ ಸರಸ್ವತಿ ನದಿ ಹುಟ್ಟಿದ್ದು, ಅರಳಿ ಮರದಿಂದ (ಬ್ರಹ್ಮನ ವಾಸಸ್ಥಾನ ಅರಳಿಯ ಬೇರು. ಬ್ರಹ್ಮನಿಂದ ಹುಟ್ಟಿದ್ದು ಸರಸ್ವತಿ. ಆದ್ದರಿಂದ ಜ್ಞಾನಕ್ಕೆ ಅರಳಿಯ ಬೇರು ಕಾರಣ ಎಂದು ನಂಬಲಾಗಿದೆ). ಬುದ್ಧನಿಗೆ ಜ್ಞಾನೋದಯವಾಗಿದ್ದೂ, ಮೋಕ್ಷ ಸಿಕ್ಕಿದ್ದೂ ಅರಳಿ ಮರದ ಕೆಳಗೇನೇ. ವಿಷ್ಣು ಪುರಾಣದ ಪ್ರಕಾರ 'ಪ್ರಳಯವಾದಾಗ ಜೀವ ರಾಶಿಯನ್ನು ಅರಳಿ ಬೀಜದಲ್ಲಿ ಸಂರಕ್ಷಿಸಿ ಇಡಲಾಗುತ್ತದೆ'. ಪಿಪ್ಪಲ ಮಹರ್ಷಿಯೇ ಅರಳಿ ಮರವೆಂದು ಪುರಾಣಗಳು ಹೇಳುತ್ತವೆ.

ಧಾರ್ಮಿಕ ನಂಬಿಕೆಗಳು ಏನೇ ಇರಲಿ, ನಮ್ಮ ಹಿರಿಯರು ಮರಗಳನ್ನು ರಕ್ಷಿಸಲು ಈ ರೀತಿ ದೇವಾನು ದೇವತೆಗಳು ಇರುವರು ಎಂದು ಹೇಳಿರಬಹುದು. ಅವರಿಗೆ ಅರಳಿ ಮರದ ಪ್ರಾಮುಖ್ಯತೆ ಗೊತ್ತಿತ್ತು. ನಮ್ಮ ಹಿರಿಯರ ವೈದ್ಯಕೀಯ ಜ್ಞಾನವು ಅಪಾರ. ಆಮ್ಲಜನಕವನ್ನು ಜಾಸ್ತಿ ಉತ್ಪಾದಿಸುವ ಸಸ್ಯಗಳಲ್ಲಿ ಅರಳಿಗೆ ಅಗ್ರಸ್ಥಾನವೆಂದು ಅವರು ಅಂದೇ ಕಂಡುಕೊಂಡಿದ್ದರು. ಅದಕ್ಕೆ ಊರಿಗೊಂದು ಅರಳಿ ಕಟ್ಟೆ ಇದ್ದೇ ಇರುತ್ತಿತ್ತು. ಹೆಣ್ಣು ಮಕ್ಕಳು ಪೂಜೆಯ ನೆಪದಲ್ಲಿ, ಗಂಡಸರು ಪಂಚಾಯಿತಿ ನಡೆಸುವ ನೆಪದಲ್ಲಿ, ಮಕ್ಕಳು ಆಡುವ ನೆಪದಲ್ಲಿ ಅರಳಿಯ ಸುತ್ತಲೂ ಇದ್ದು, ಅದರ ಗಾಳಿಯ ಪ್ರಯೋಜನ ಪಡೆಯುತ್ತಿದ್ದರು. ಹೀಗಾಗಿ ದೈಹಿಕ, ಮಾನಸಿಕ ಆರೋಗ್ಯ (ಅರಳಿಯ ಗಾಳಿ ಸೇವನೆಯಿಂದ ನಮ್ಮ ದೇಹದಲ್ಲಿ ಮನಸ್ಸನ್ನು ಉಲ್ಲಾಸವಾಗಿಡುವ ಸೆರಟೋನಿಯಂ ಎಂಬ ಹಾರ್ಮೋನ್ ಬಿಡುಗಡೆಯಾಗುತ್ತದೆ) ಸಮತೋಲನದಲ್ಲಿರುತಿತ್ತು.

ಅನಾದಿ ಕಾಲದಿಂದಲೂ ಪಾರಂಪರಿಕ ವೈದ್ಯರು ಇದನ್ನು ದೇಶೀ ಪದ್ಧತಿಯ ವೈದ್ಯಕೀಯದಲ್ಲಿ ವ್ಯಾಪಕವಾಗಿ ಬಳಸುತ್ತಿದ್ದಾರೆ. ನಾಟಿ ವೈದ್ಯರು ಅರಳಿ ಮರದ ಎಲ್ಲಾ ಭಾಗಗಳ ವೈದ್ಯಕೀಯ ಜ್ಞಾನ



ಹೊಂದಿದ್ದು, ಅರಳಿಯಿಂದ ಔಷಧಿ ಮಾಡುವ ಕಲೆ ಅವರಿಗೆ ಕರಗತವಾಗಿರುತ್ತದೆ.

ತುರಿಕೆ ಮತ್ತು ಚರ್ಮದ ಸಮಸ್ಯೆಗಳನ್ನು ನಿವಾರಿಸಲು ಅರಳಿ ಮರದ ತೊಗಟೆ ತುಂಬಾ ಪ್ರಯೋಜನಕಾರಿ. ಬಿಕ್ಕು (ತೊದಲುವಿಕೆ, ಉಗ್ಗು), ಆರ್ಥವ, ಪಿತ್ತಕೋಶದ ತೊಂದರೆ, ವಾಂತಿ, ಅಸ್ತಮಾ, ದುರ್ಬಲತೆ, ಮಲಬದ್ಧತೆ, ಮೂತ್ರಪಿಂಡ, ಉದರಶೂಲ, ವಿಷ, ದಾಹ, ಪ್ರಮೇಹ, ವಾಜೀಕರಣ, ಅತಿಸಾರ ಸೇರಿದಂತೆ ಅನೇಕ ಪ್ರಮುಖ ಕಾಯಿಲೆಗಳಿಗೆ ಮರದ ಸರ್ವಾಂಗಗಳು ಪರಿಣಾಮಕಾರಿ ಔಷಧಿಯಾಗಿವೆ. ಇಷ್ಟೇ ಅಲ್ಲದೇ ಕಾಮಾಲೆ, ರಾತ್ರಿ ಕುರುಡುತನ, ಕೆಮ್ಮು, ಮಲೇರಿಯಾ ಮುಂತಾದ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಅರಳಿ ಮರದ ರೆಂಬೆ ಮತ್ತು ಬೇರುಗಳನ್ನು ಬಳಸಲಾಗುತ್ತದೆ. ಅರಳಿ ಮರದಿಂದ ಮಾಡಿದ ಬ್ರಶ್ (ಕಡ್ಡಿ) ಹಲ್ಲುಗಳನ್ನು, ಒಸಡುಗಳನ್ನು ಬಲಪಡಿಸುತ್ತವೆ. ಈ ಕಡ್ಡಿಗಳಿಂದ ಪ್ರತಿದಿನ ಹಲ್ಲುಗಳನ್ನು ಸ್ವಚ್ಛಗೊಳಿಸುವ ಮೂಲಕ ಹಲ್ಲುನೋವು, ಹನುಗ್ರಹ (ಲಾಕ್ ಜಾ)ಸಮಸ್ಯೆಗೆ ಪರಿಹಾರ ಕಾಣಬಹುದು.

ಅರಳಿ ಎಲೆಗಳಲ್ಲಿ ಉತ್ಕರ್ಷಣ ನಿರೋಧಕಗಳು ಸಮೃದ್ಧವಾಗಿವೆ. ಅದರ ಮೃದುವಾದ ಎಲೆಗಳನ್ನು ನಿಯಮಿತವಾಗಿ ಅಗಿಯುವುದರಿಂದ ದೇಹದೊತ್ತಡ ಕಡಿಮೆಯಾಗುತ್ತದೆ. ಹಾಗೆಯೇ ಇದರಲ್ಲಿ ಆಂಟಿ ಆಕ್ಸಿಡೆಂಟ್‌ಗಳು ಹೇರಳವಾಗಿರುವುದರಿಂದ ಯೌವ್ವನವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಚಿಗುರು ಎಲೆಗಳಿಂದ ಪೌಷ್ಟಿಕವೂ, ಶಾಂತಿಯೂ, ಸ್ಮರಣ ವೃದ್ಧಿಯೂ ದೊರೆಯುತ್ತದೆ. ಮೆದುಳಿನ ದುರ್ಬಲತೆ, ಉನ್ಮಾದ, ಭ್ರಮೆ, ಬಂಜೆತನ, ಕುಷ್ಠ ನಿವಾರಿಸುತ್ತದೆ.

ಮಲಬದ್ಧತೆ ಅಥವಾ ಗ್ಯಾಸ್ ಸಮಸ್ಯೆಯಿಂದ ಬಳಲುತ್ತಿರುವವರು ಈ ಸಮಸ್ಯೆಯನ್ನು ತೊಡೆದು ಹಾಕಲು ಅರಳಿ ಮರದ ಎಲೆಗಳನ್ನು ಔಷಧಿಯಾಗಿ ಬಳಸಬಹುದು. ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಅರಳಿ ಎಲೆಗಳ ರಸ ವನ್ನು ಕುಡಿಯುವುದರಿಂದ ಹೊಟ್ಟೆಯ ಸಮಸ್ಯೆಗಳಿಗೆ ಪರಿಹಾರವನ್ನು ಕಾಣಬಹುದು. ಹಾಗೆಯೇ ದಿನನಿತ್ಯ ಒಂದು ಟೀ ಸ್ಪೂನ್ ಅರಳಿ ಎಲೆ ರಸವನ್ನು ಕುಡಿಯುವುದರಿಂದ ಪಿತ್ತದ ಸಮಸ್ಯೆಯನ್ನು ನಿವಾರಿಸಬಹುದು.

ಆಯುರ್ವೇದದ ಪ್ರಕಾರ ವಾತ, ಪಿತ್ತ ಮತ್ತು ಕಫ ಈ ಮೂರೂ ದೋಷಗಳಿಂದ ಉಂಟಾಗುವ ವಿವಿಧ ರೋಗಗಳನ್ನು ಗುಣಪಡಿಸಲು ಅರಳಿ ಸಹಾಯ ಮಾಡುತ್ತದೆ. ಇದರ ಜೊತೆಗೆ ಅರಳಿ ಎಲೆಗಳು ರಕ್ತವನ್ನು ಸ್ವಚ್ಛಗೊಳಿಸುವಲ್ಲಿ ಮತ್ತು ಹೊಟ್ಟೆಯನ್ನು ಸ್ವಚ್ಛಗೊಳಿಸುವಲ್ಲಿ ಸಹ ಸಹಾಯಕವಾಗಿವೆ. ಅರಳಿ ಎಲೆಗಳ ರಸವು ದೇಹದಲ್ಲಿ ಸಂಗ್ರಹವಾಗಿರುವ ವಿಷ ಮತ್ತು ಕೊಳೆಯನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಇದು ಹರ್ಪಿಸ್ ಅಥವಾ ತುರಿಕೆಯ ಸಮಸ್ಯೆಯನ್ನು ನಿವಾರಿಸುತ್ತದೆ. ಅರಳಿ ಎಲೆಗಳ ಕಷಾಯ ಹೃದಯವನ್ನು ಆರೋಗ್ಯವಾಗಿಡಲು ಸಹಾಯ ಮಾಡುತ್ತದೆ. ಹಾಗೆಯೇ ಗಾಯವಾಗಿದ್ದರೆ, ಅರಳಿ ಎಲೆಗಳ ಬೆಚ್ಚಗಿನ ಪೇಸ್ಟ್ ಅನ್ನು ಹಾಕಬೇಕು. ಹೀಗೆ ಮಾಡುವುದರಿಂದ ನೋವು ನಿವಾರಣೆಯಾಗುತ್ತದೆ. ಅದೇ ರೀತಿ ಅರಳಿ ಮರದ ತೊಗಟೆ ಪುಡಿಯನ್ನು ಗಾಯಗಳಿಗೆ ಉದುರಿಸುವುದರಿಂದ ಕಿರಿಕಿರಿ ಕಡಿಮೆಯಾಗುವುದಲ್ಲದೆ, ತ್ವರಿತವಾಗಿ ಗಾಯ ಮಾಯುತ್ತದೆ.

ಅರಳಿ ಎಲೆಯನ್ನು ಚಿತ್ರಕಲೆಯಲ್ಲಿ ಬಳಸುತ್ತಾರೆ.

ಇಷ್ಟೊಂದು ಔಷಧೀಯ ಗುಣಗಳಿವೆ ಎನ್ನುವ ಕಾರಣಕ್ಕೆ ಅಶ್ವತ್ಥವನ್ನು ದೈವೀಕ ಮರ ಎಂದು ಹೇಳಬಹುದು. ಆದ್ದರಿಂದ ನಿಮ್ಮ ಸುತ್ತಮುತ್ತ ಏರಿಯಾದಲ್ಲಿ ಒಂದು ಅರಳಿ ಮರವಿರುವಂತೆ ನೋಡಿಕೊಳ್ಳಿ.

**- ಮಮತಾ ನಾಗರಾಜ್,**
ಪಾರಂಪರಿಕ ವೈದ್ಯರು, ದಾವಣಗೆರೆ.

# ಮದರಕಟ್ಟೆ ಕೆರೆ ಕೋಡಿ ಒಡೆದು ಜಮೀನುಗಳಿಗೆ ನೀರು : ಮೆಕ್ಕೆಜೋಳ ಜಲಾವೃತ




ಹರಪನಹಳ್ಳಿ, ಅ.9- ಕಳೆದ ಎರಡು, ಮೂರು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ತಾಲ್ಲೂಕಿನ ಹಲವೆಡೆ ಕೆರೆ, ಕಟ್ಟೆ ತುಂಬಿ ಹರಿಯುತ್ತಿದ್ದು, ಕಂಚಿಕೇರಿ ಗ್ರಾಮದ ಮದರಕಟ್ಟೆ ಕೆರೆ ಕೋಡಿ ಒಡೆದು ಜಮೀನುಗಳಿಗೆ ನೀರು ನುಗ್ಗಿದೆ.

ಕೆರೆ ಕೋಡಿ ಒಡೆದ ಪರಿಣಾಮ ಗ್ರಾಮದ ರೈತ ಮಹಿಳೆ ಬಿದರಿ ಮಲ್ಲಮ್ಮನವರಿಗೆ ಸೇರಿದ ಸುಮಾರು ನಾಲ್ಕು ಎಕರೆ ಮೆಕ್ಕೆಜೋಳ ಬೆಳೆಗೆ ನೀರು ನುಗ್ಗಿ, ಸಂಪೂರ್ಣ ಜಲಾವೃತಗೊಂಡಿದೆ. ಕಟಾವು ಹಂತಕ್ಕೆ ಬೆಳೆದು ನಿಂತಿದ್ದ ಮೆಕ್ಕೆಜೋಳ ನೀರು ನುಗ್ಗಿರುವುದರಿಂದ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ ಎಂದು ರೈತ ಮಹಿಳೆ ಬಿದರಿ ಮಲ್ಲಮ್ಮ ತಮ್ಮ ಅಳಲು ತೊಡಿಕೊಂಡರು. ಸ್ಥಳಕ್ಕೆ ಕಂದಾಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಹರಪನಹಳ್ಳಿ ಕಸಬಾ ವ್ಯಾಪ್ತಿ 7.0 ಮಿ.ಮೀ. ಮಳೆಯಾದರೆ ತಾಲ್ಲೂಕಿನ ಅರಸೀಕೆರೆ ಹೋಬಳಿ 10.1 ಮಿ.ಮೀ., ಚಿಗಟೇರಿ 14.2 ಮಿ.ಮೀ., ಹಿರೇಮೇಗಳಗೆರೆ 43.2 ಮಿ.ಮೀ., ಉಚ್ಚಂಗಿದುರ್ಗ 40.4 ಮಿ.ಮೀ., ತೆಲಗಿ 27.4 ಮಿ.ಮೀ., ಹಲವಾಗಲು 48.5 ಮಿ.ಮೀ., ಮಳೆಯಾಗಿದೆ ಎಂದು ತಹಶೀಲ್ದಾರ್ ಎಲ್.ಎಂ. ನಂದೀಶ್ ತಿಳಿಸಿದ್ದಾರೆ.

## ಕಮಲಾಪುರದಲ್ಲಿ ಮನೆ ಗೋಡೆ ಕುಸಿತ : ಆಕಳು, ಕರು ಸಾವು



ಮಲೇಬೆನ್ನೂರು, ಅ.9- ಕಮಲಾಪುರ ಗ್ರಾಮದ ಗಿರಿಜಮ್ಮ ಕೋಂ ಪತ್ರಪ್ಪ ಅವರ ವಾಸದ ಮನೆ ಗೋಡೆಗಳು ಮಳೆಯಿಂದ ಕುಸಿದು ಬಿದ್ದ ಪರಿಣಾಮ ಗಿರಿಜಮ್ಮ ಅವರ ತಲೆಗೆ ಮತ್ತು ಕಾಲಿಗೆ ಪೆಟ್ಟಾಗಿದೆ. ಮನೆಯ ಆಕಳು ಹಾಗೂ ಕರು ಸಾವನ್ನಪ್ಪಿವೆ ಎಂದು ಉಪತಹಶೀಲ್ದಾರ್ ಆರ್. ರವಿ ತಿಳಿಸಿದ್ದಾರೆ.


## ನಂಬಿಕಸ್ಥನಂತೆ ನಟಿಸಿ ಕೆಲಸಕ್ಕೆ ಸೇರಿದ್ದವನಿಂದ ದ್ರೋಹ

ದಾವಣಗೆರೆ, ಅ.9- ನಂಬಿಕಸ್ಥನಂತೆ ನಟಿಸಿ ಕೆಲಸಕ್ಕೆ ಸೇರಿದ್ದ ವ್ಯಕ್ತಿಯು ಫಾರ್ಮ್ ಹೌಸ್ ಮಾಲೀಕರ ಮನೆಯಲ್ಲಿದ್ದ 8 ಲಕ್ಷ ಚಿನ್ನಾಭರಣ, 20 ಸಾವಿರ ನಗದು ದೋಚಿರುವ ಘಟನೆ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಚನ್ನಗಿರಿಯ ಕಣದಸಾಲು ಬಡಾವಣೆಯ ಸಿ.ಹೆಚ್. ಶಿವಮೂರ್ತಿ ಅವರು ವಿ.ಆರ್. ಬಡಾವಣೆಯಲ್ಲಿ ಕುರಿ ಫಾರ್ಮ್ ಹೌಸ್ ಮಾಡಿದ್ದಾರೆ. ಕೋಲಾರ ಪುರಸಭೆಯಲ್ಲಿ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಲಕ್ಷ್ಮಮ್ಮ ಎಂಬುವವರ ಮಗನೆಂದು ಹೇಳಿ, ಕಾಡಿಬೇಡಿ ಕೆಲಸಕ್ಕೆ ಗಿಟ್ಟಿಸಿಕೊಂಡ ವಿಜಯ್ ಎಂಬಾತ ನಂಬಿಕಸ್ಥನಂತೆ ಕೆಲಸ ಮಾಡುತ್ತಿದ್ದ.

ಗುರುವಾರ ವಿಜಯನು ಫಾರ್ಮ್ ಹೌಸ್‌ನಿಂದ ಮಾಲೀಕನ ಮನೆಗೆ ಟೀ ಕುಡಿಯಲೆಂದು ಬಂದಿದ್ದು, ಈ ವೇಳೆ ಮಾಲೀಕನ ಪತ್ನಿಯು ಟೀ ಕೊಟ್ಟು ಒಗೆದ ಬಟ್ಟೆಗಳನ್ನು ಮನೆಯ ಮಹಡಿ ಮೇಲೆ ಒಣಹಾಕಲು ಹೋಗಿದ್ದರು. ಈ ವೇಳೆಯನ್ನೇ ಬಂಡವಾಳವಾಗಿಸಿಕೊಂಡ ವಿಜಯನು ಬೀರುವಿನ ಬೀಗ ತೆಗೆದು ಅದರಲ್ಲಿದ್ದ ಬಂಗಾರದ ಆಭರಣ ಮತ್ತು ನಗದು ಕಳ್ಳತನ ಮಾಡಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ.

# ಸಾಲಕಟ್ಟೆ ಪ್ರೌಢಶಾಲೆಗೆ ಕಂಪ್ಯೂಟರ್ ಕೊಡುಗೆ



ಮಲೇಬೆನ್ನೂರು, ಅ.9- ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡಲು ಜಿಲ್ಲೆಯಲ್ಲಿ ಹೆಚ್ಚಿನ ಶಾಲೆಗಳು ಖಾಸಗಿ ಸಹಭಾಗಿತ್ವದೊಂದಿಗೆ ಮೂಲಸೌಕರ್ಯ ಮತ್ತು ಡಿಜಿಟಲ್ ಕಲಿಕಾ ತಂತ್ರಗಳನ್ನು ಹೆಚ್ಚಿಸಿಕೊಳ್ಳಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಆರ್. ಪರಮೇಶ್ವರಪ್ಪ ತಿಳಿಸಿದರು.

ಸಾಲಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಏರ್ಪಾಡಾಗಿದ್ದ ಬೆಂಗಳೂರಿನ ಅನಿತಾ ಗುರುರಾಜ್ ಅವರು ಕೊಡುಗೆಯಾಗಿ ನೀಡಿದ ಕಂಪ್ಯೂಟರ್ ಉದ್ಘಾಟನೆ ಮತ್ತು ಸ್ವಾಮಿ ವಿವೇಕಾನಂದ ಯುವ ಬ್ರಿಗೇಡ್ ಪ್ರಾಯೋಜಿತ ಕೊರೊನಾ ನಿಯಂತ್ರಣದ ಸಂಜೀವಿನಿ ಆಯುರ್ವೇದಿಕ್ ಚೂರ್ಣ ವಿತರಿಸಿ ಅವರು ಮಾತನಾಡಿದರು.

ಡಿಜಿಟಲ್ ಸ್ಮಾರ್ಟ್ ತರಗತಿಗಳ ಮೂಲಕ ಶಿಕ್ಷಣ ಕೇವಲ ಒಂದು ಅಭ್ಯಾಸವಾಗದೇ, ಒಂದು ಅನುಭವವಾಗಲು ಶಾಲೆಗಳು ವಿನೂತನ ತಂತ್ರಗಳನ್ನು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ಮಾತನಾಡಿ, ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆಯಾದ ಅಂತರ್ಜಾಲದ ಪ್ರಯೋಜನ ಪಡೆದು ಕಂಪ್ಯೂಟರ್ ಸಾಕ್ಷರರಾಗುವ ಮೂಲಕ ಜಾಗತಿಕ ಪೈಪೋಟಿ ಎದುರಿಸಲು ತಯಾರಿರಬೇಕು. ಸರ್ಕಾರಿ ಶಾಲೆಗಳ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸ್ವಾಮಿ ವಿವೇಕಾನಂದ ಬ್ರಿಗೇಡ್ ಸಂಜೀವಿನಿ ಆಯುರ್ವೇದಿಕ್ ಚೂರ್ಣವನ್ನು ಉಚಿತವಾಗಿ ನೀಡುತ್ತಿರುವುದು ಶ್ಲಾಘನೀಯ ಎಂದರು.

ಹರಿಹರ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ ಸಂಜೀವಿನಿ ಆಯುರ್ವೇದ ಚೂರ್ಣವನ್ನು ಸೇವಿಸುವ ಕುರಿತು ಮಾಹಿತಿ ನೀಡಿದರು.

ಬಿಆರ್‌ಸಿ ಜಗದೀಶ್ ಉಜ್ಜಮ್ಮನವರ, ಜಿಲ್ಲಾ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಶಿಕ್ಷಕರ ಸಂಘದ ನಿರ್ದೇಶಕ ಚನ್ನಬಸಪ್ಪ, ಸಿಆರ್‌ಪಿ ಸತೀಶ್ ಕುಮಾರ್, ನಂಜುಂಡಪ್ಪ, ಮುಖ್ಯ ಶಿಕ್ಷಕರಾದ ಆರ್.ಆರ್.ಮಠ, ಗಂಗಾಧರ್, ವೆಂಕಟೇಶ್, ಶಿಕ್ಷಕರಾದ ಆರ್.ಬಿ. ಮಲ್ಲಿಕಾರ್ಜುನ್, ಹನುಮರೆಡ್ಡಿ, ಜೆ.ಕೆ. ರಾಜು, ಗಣೇಶಪ್ಪ, ಕರಿಬಸಪ್ಪ, ಅಮಿತ್ ಕುಮಾರ್, ಕೆ. ಶಾಂತಮ್ಮ ಹಾಜರಿದ್ದರು.

## ಮಳೆ ಹಾನಿ : 11ನೇ ವಾರ್ಡಿನಲ್ಲಿ ಪಾಲಿಕೆ ಸದಸ್ಯರಿಂದ ಪರಿಶೀಲನೆ



ದಾವಣಗೆರೆ, ಅ.9- ಇತ್ತೀಚಿಗೆ ಅತಿ ಮಳೆಯಿಂದ ಹಾನಿಯಾಗಿರುವ 11ನೇ ವಾರ್ಡಿನಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಚಾರ್ಲಿ ಅವರು ಪಾಲಿಕೆಯ ಹಿರಿಯ ಆರೋಗ್ಯ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಕುಂದು - ಕೊರತೆಗಳನ್ನು ಆಲಿಸಿದರು.

## ಹರಿಹರೇಶ್ವರ ಯೋಗ ಕೇಂದ್ರದ ಸಾಧನೆ



ಹರಿಹರ, ಅ.9- ಶಿವಮೊಗ್ಗದಲ್ಲಿ ವರ್ಷಿಣಿ ಯೋಗ ಮತ್ತು ಸಾಂಸ್ಕೃತಿಕ ಕ್ರೀಡಾ ಟ್ರಸ್ಟ್ ನಡೆಸಿದ ರಾಷ್ಟ್ರ ಮಟ್ಟದ ಯೋಗಾಸನ ಸ್ಪರ್ಧೆ ಚಾಲೆಂಜ್ ರೆಕಾರ್ಡ್ 2 ನಿಮಿಷದಲ್ಲಿ 20 ಆಸನಗಳ ಸಾಧನೆ ಕಾರ್ಯಕ್ರಮದಲ್ಲಿ ಹರಿಹರದ ಹರಿಹರೇಶ್ವರ ಯೋಗ ಕೇಂದ್ರದ ಪಟುಗಳು ಭಾಗವಹಿಸಿ, ಸಾಧನೆ ಮಾಡಿದ್ದಾರೆ.

ಯೋಗ ಶಿಕ್ಷಕರಾದ ಸ್ವಪ್ನ ಮತ್ತು 12 ಜನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, ಅಂತರರಾಷ್ಟ್ರೀಯ ಯೋಗಪಟು ಸ್ವಪ್ನ ಅವರಿಗೆ ಅತ್ಯುತ್ತಮ ಯೋಗ ಶಿಕ್ಷಕಿ ಪ್ರಶಸ್ತಿ ಲಭಿಸಿದೆ. ಕಾರ್ಯಕ್ರಮದಲ್ಲಿ ವರ್ಷಿಣಿ ಯೋಗ ಶಿಕ್ಷಣ ಟ್ರಸ್ಟ್ ಸಂಸ್ಥಾಪಕರು, ಕಾರ್ಯದರ್ಶಿಗಳಾದ ಎನ್.ಡಿ. ವೆಂಕಟೇಶ್, ಹುಬ್ಬಳ್ಳಿ ಧ್ಯಾನ ಜ್ಯೋತಿ ಯೋಗ ಕೇಂದ್ರದ ಶಿಕ್ಷಕಿ ಜ್ಯೋತಿ ಎಸ್. ಹಿರೇಮಠ್ ಹಾಗೂ ಇನ್ನಿತರೆ ಯೋಗ ಶಿಕ್ಷಕರು ಉಪಸ್ಥಿತರಿದ್ದರು.

## ಪೀಠೋಪಕರಣಗಳ ಅಂಗಡಿಗೆ ಕನ್ನ

ದಾವಣಗೆರೆ, ಅ.9- ಪೀಠೋಪಕರಣಗಳ ಅಂಗಡಿಗೆ ಕನ್ನ ಹಾಕಿರುವ ಕಳ್ಳರು 1 ಲಕ್ಷದ 25 ಸಾವಿರ ನಗದು ಹಾಗೂ ಅಂಗಡಿಯಲ್ಲಿ ಅಳವಡಿಸಿದ್ದ 10 ಸಾವಿರ ಮೌಲ್ಯದ ಸಿಸಿಟಿವಿ ಡಿವಿಆರ್ ಕಳವು ಮಾಡಿರುವ ಘಟನೆ ಇಲ್ಲಿನ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ನಲ್ಲಿರುವ ನೀಲ್‌ಕಮಲ್ ಫರ್ನಿಚರ್ ಐಡಿಯಾಸ್ ವೆಂಕಟೇಶ್ವರ ಏಜೆನ್ಸೀಸ್ ಅಂಗಡಿಯನ್ನು ಮಾಲೀಕ ಸಿ.ಎಂ. ಹರ್ಷ ಗುರುವಾರ ರಾತ್ರಿ ವ್ಯವಹಾರ ಮುಗಿಸಿ ಎಂದಿನಂತೆ ಅಂಗಡಿಗೆ ಬೀಗ ಹಾಕಿಕೊಂಡು ಹೋಗಿದ್ದರು. ಇಂದು ಬೆಳಗಾಗುವಷ್ಟರಲ್ಲಿ ಅಂಗಡಿಯ ಬಲ ಭಾಗದ ಕಿಟಕಿಯ ಕಬ್ಬಿಣದ ರಾಡ್ ಮುರಿದು ಒಳ ನುಗ್ಗಿರುವ ಕಳ್ಳರು ಕ್ಯಾಷ್ ಕೌಂಟರ್ ನಲ್ಲಿಟ್ಟಿದ್ದ ನಗದು ಹಾಗೂ ಸಿಸಿಟಿವಿ ಡಿವಿಆರ್ ಕಳ್ಳತನ ಮಾಡಿದ್ದಾರೆ.


## ಬ್ಯಾಂಕ್ ಹೆಸರು ಬದಲಾವಣೆ ನೆಪ ಗುತ್ತಿಗೆದಾರನಿಗೆ ವಂಚನೆ


ದಾವಣಗೆರೆ, ಅ.9- ಬ್ಯಾಂಕ್ ಹೆಸರು ಬದಲಾವಣೆಯ ನೆಪ ಹೇಳಿ ಬ್ಯಾಂಕ್ ಅಧಿಕಾರಿ ಸೋಗಿನಲ್ಲಿ ಬ್ಯಾಂಕ್ ಖಾತೆ ಮತ್ತು ಎಟಿಎಂ ಕಾರ್ಡ್ ಬಗ್ಗೆ ಮಾಹಿತಿ ಪಡೆದು ಗುತ್ತಿಗೆದಾರನಿಗೆ ವಂಚಿಸಿರುವ ಘಟನೆ ಇಲ್ಲಿನ ಸಿಇಎನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಸ್ಥಳೀಯ ವಿದ್ಯಾನಗರದ ಹೆಚ್. ರಾಮಲಿಂಗಪ್ಪ ವಂಚನೆಗೊಳಗಾದ ಗುತ್ತಿಗೆದಾರ. ದೂರವಾಣಿ ಮುಖೇನ ಸಂಪರ್ಕಿಸಿದ ಅಪರಿಚಿತನು, ತಾನು ವಿಜಯ ಬ್ಯಾಂಕ್ ವ್ಯವಸ್ಥಾಪಕನೆಂದು ಪರಿಚಿತಗೊಂಡು, ವಿಜಯ ಬ್ಯಾಂಕ್ ಈಗ ಬ್ಯಾಂಕ್ ಆಫ್ ಬರೋಡ ಆಗಿ ಬದಲವಣೆಯಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ವಿಜಯ ಬ್ಯಾಂಕ್ ಎಟಿಎಂ ಕಾರ್ಡ್ ಬದಲಿಗೆ ಬ್ಯಾಂಕ್ ಆಫ್ ಬರೋಡದ ಎಟಿಎಂ ಕಾರ್ಡ್ ಕೊಡಲಿದ್ದು, ಶ್ಯೂರಿಟಿಗಾಗಿ ಬ್ಯಾಂಕ್ ಖಾತೆಯ ಸಂಖ್ಯೆ ಮತ್ತು ಎಟಿಎಂ ಕಾರ್ಡ್ ಮಾಹಿತಿ ನೀಡುವಂತೆ ತಿಳಿಸಿದ್ದು, ಇದನ್ನೇ ನಂಬಿದ ರಾಮಲಿಂಗಪ್ಪ ತನ್ನ ದೂರವಾಣಿ ಸಂಖ್ಯೆಗೆ 3 ಬಾರಿ ಬಂದ ಓಟಿಪಿ ನಂಬರ್ ಗಳನ್ನು ಅಪರಿಚಿತನಿಗೆ ನೀಡಿದ್ದು, ಕೆಲ ಸಮಯದ ಬಳಿಕ ಬ್ಯಾಂಕ್ ಖಾತೆಯಿಂದ ಮೂರು ಬಾರಿ 40 ಸಾವಿರ ರೂ. ಹಣ ಕಡಿತವಾಗಿದೆ. ಈ ಬಗ್ಗೆ ವಿಚಾರಿಸಿದಾಗ ಹಣವನ್ನು ಪುನಃ ಬ್ಯಾಂಕ್ ಖಾತೆಗೆ ಮರಳಿಸುವುದಾಗಿ ಹೇಳಿ ವಂಚಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.


ದಾವಲ್ ಪೇಟೆಯ ಶ್ರೀ ಚೌಡೇಶ್ವರಿ ದೇವಿ


ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಿ


ಶಾರದಾ ಮಠದಲ್ಲಿನ ಶ್ರೀ ಶಾರದಾಂಬೆ



ನಗರ ದೇವತೆ ಶ್ರೀ ದುರ್ಗಾಂಭಿಕಾ ದೇವಿ


ಹಳೆಪೇಟೆಯ ಕಾಳಿಕಾದೇವಿ


ಕೆಎಸ್ಸಾರ್ಟಿಸಿ ರಸ್ತೆಯ ಚೌಡಾಂಬಿಕೆ

## ನವರಾತ್ರಿ : ನಗರದಲ್ಲಿ ಬ್ರಹ್ಮಚಾರಿಣಿ ಸ್ವರೂಪ ಆರಾಧನೆ



ದಾವಣಗೆರೆ, ಅ. 9 - ಶರನ್ನವರಾತ್ರಿಯ ಎರಡನೇ ದಿನದಂದು ಶ್ರೀ ದೇವಿಯನ್ನು 'ಶ್ರೀ ಬ್ರಹ್ಮಚಾರಿಣಿ' ಸ್ವರೂಪದಲ್ಲಿ ಆರಾಧಿಸಿ ಪೂಜಿಸಲಾಗುತ್ತದೆ.

ಶಿವನನ್ನು ಪಡೆಯಲು ಕಠಿಣ ತಪಸ್ಸನ್ನು ಮಾಡಿದ ಪಾರ್ವತಿಯ ಈ ರೂಪಕ್ಕೆ ಬ್ರಹ್ಮಚಾರಿಣಿ ಎಂಬ ಹೆಸರು ಬಂದಿದೆ ಎಂದು ಪುರಾಣದಲ್ಲಿ ಉಲ್ಲೇಖ ವಿದೆ. 'ಬ್ರಹ್ಮಚಾರಯಿತುಂ ಶೀಲಂ ಯಸ್ಯಾಃ ಸಾ ಬ್ರಹ್ಮಚಾರಿಣಿ'

ಆತ್ಮವಿಶ್ವಾಸ, ಸಮೃದ್ಧಿ, ಶಾಂತಿ, ಜ್ಞಾನ ಮತ್ತು ಸಫಲತೆಗಳ ತಾಯಿ ಶ್ರೀ ಬ್ರಹ್ಮಚಾರಿಣಿ ದೇವಿಯನ್ನು ಈ ದಿನ ಪೂಜಿಸಿದರೆ ಕಂಕಣ ಬಲ ಕೂಡಿ ಬರಲಿದೆ ಎನ್ನುವ ನಂಬಿಕೆಯೂ ಭಕ್ತರಲ್ಲಿದೆ.

ನವರಾತ್ರಿಯ ಎರಡನೇ ಸಂಭ್ರಮದ ಈ ಚಿತ್ರದಲ್ಲಿ ಸ್ಥಳೀಯ ಸರಸ್ವತಿ ನಗರದ ಮಂಜುಳಾ ವೆಂಕಟೇಶ್, ಆರ್. ರಾಧಾ, ಮಂಗಳಾ ಪುಟ್ಟರಾಜು, ವಿನುತಾ ರಾಜೇಶ್, ನಾಗೇಶ್ವರಿ ನಾಯರಿ, ಉಮಾ ಜಗನ್ನಾಥ್ ಮತ್ತಿತರರಿದ್ದರು.

## ಸಫಾಯಿ ಕರ್ಮಚಾರಿ : ಅರ್ಜಿ ಆಹ್ವಾನ


ದಾವಣಗೆರೆ, ಅ. 9- ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ದಿ ನಿಗಮದಿಂದ ಸಫಾಯಿ ಕರ್ಮಚಾರಿ / ಪೌರ ಕಾರ್ಮಿಕರು ಹಾಗೂ ಮ್ಯಾನುಯಲ್ ಸ್ಕ್ಯಾವೆಂಜರ್ಸ್‌ಗಳಿಗೆ ವಿವಿಧ ಯೋಜನೆಗಳನ್ನು ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ದಿ ನಿಗಮ, ದಾವಣಗೆರೆ ಇವರನ್ನು ಸಂಪರ್ಕಿಸಬಹುದು.

## ಸೂಜಿ - ದಾರದಿಂದ ಮಾನ ಉಳಿಸುವ ದರ್ಜಿಗಳ ಕಾಯಕ ಧರ್ಮಪ್ರದತ್ತವಾದುದು

ದಾವಣಗೆರೆ, ಅ.9- ಸಮಾಜದಲ್ಲಿ ಕತ್ತರಿ ಹಾಕುವವರೇ ಹೆಚ್ಚು. ಆದರೆ ದರ್ಜಿಗಳಿಂದ ಬೇಡವಾಗಿದ್ದಕ್ಕೆ ಕತ್ತರಿ ಹಾಕಿ ಸೂಜಿ-ದಾರದಿಂದ ಬಟ್ಟೆ ಹೊಲಿದು ಶ್ರೀಮಂತ, ಬಡವ ಎಂಬ ಭೇದವಿಲ್ಲದೇ ಮಾನ, ಮರ್ಯಾದೆ ಉಳಿಯುವಂತಹ ಬಟ್ಟೆ ತಯಾರಿಸಿ ಕೊಡುವ ಕಾಯಕ ಧರ್ಮಪ್ರದತ್ತವಾದುದು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ರೋಟರಿ ಬಾಲಭವನದಲ್ಲಿ ಇಂದು ನಡೆದ ರಾಜ್ಯ ಹೊಲಿಗೆ ಕೆಲಸಗಾರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ಉದ್ಘಾಟನೆ, ಕಾರ್ಮಿಕ ಇಲಾಖೆಯಿಂದ ದರ್ಜಿಗಳಿಗೆ ಫುಡ್‌ಕಿಟ್ ವಿತರಣೆ ಹಾಗೂ ಹಿರಿಯ ದರ್ಜಿಗಳಿಗೆ ಸನ್ಮಾನ ಸಮಾರಂಭದ ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ಕೌಶಲ್ಯವಿರುವ ಎಲ್ಲರೂ ಟೈಲರಿಂಗ್ ವೃತ್ತಿ ಮಾಡಬಹುದಾಗಿದ್ದು, ಇದಕ್ಕೆ ನಿರ್ಬಂಧವೇನು ಇಲ್ಲ. ಈ ಕೆಲಸಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅನ್ನಕ್ಕೆ ದಾರಿ ಮಾಡಿಕೊಟ್ಟಿರುವ ಕುಲಕಸುಬನ್ನು ಕೀಳೆಂದು ಕಾಣಬೇಡಿ. ಉತ್ತಮ ವೃತ್ತಿಯ ಆಯ್ಕೆಯ ಬಗ್ಗೆ ಸಂತಸವಿರಲಿ ಎಂದು ದರ್ಜಿಗಳಿಗೆ ಕಿವಿಮಾತು ಹೇಳಿದರು.



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಹಾಪೌರರಾದ ಎಸ್.ಟಿ. ವೀರೇಶ್, ಘನತೆ, ಗೌರವ ತಂದು ಕೊಡುವ ಶ್ರೇಷ್ಠ ಕಾಯಕದ ವೃತ್ತಿ ನಿಮ್ಮದಾಗಿದ್ದು, ಈ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳದೇ, ಪುಣ್ಯದ ಕೆಲಸ ಎಂದು ತಿಳಿದು ವೃತ್ತಿ ಮಾಡಬೇಕು ಎಂದು ದರ್ಜಿಗಳಿಗೆ ಸಲಹೆ ನೀಡಿದರು.

ಕಾರ್ಮಿಕ ಇಲಾಖೆ ಸಹಾಯಕ ನಿರ್ದೇಶಕ ಇಬ್ರಾಹಿಂ ಸಾಬ್ ಮಾತನಾಡಿ, ಕೋವಿಡ್ ಲಾಕ್‌ಡೌನ್ ಪರಿಹಾರವಾಗಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಸರ್ಕಾರದಿಂದ ಪರಿಹಾರ ಧನ, ದಿನಸಿ ಕಿಟ್ ನೀಡಲಾಗಿದ್ದು, ಈಗಾಗಲೇ 82 ಸಾವಿರ ಕಟ್ಟಡ ಕಾರ್ಮಿಕರಿಗೆ ಹಲವಾರು ಸಂಘಟನೆಗಳ ಸಹಕಾರದಿಂದ ಫುಡ್‌ಕಿಟ್ ವಿತರಿಸಲಾಗಿದೆ. 11 ವಿವಿಧ ಅಸಂಘಟಿತ ಕಾರ್ಮಿಕರಿಗೆ ಶೀಘ್ರದಲ್ಲಿ ಸರ್ಕಾರ ಕೊಡಮಾಡುವ 2 ಸಾವಿರ ರೂ. ಪರಿಹಾರ ಧನವನ್ನು ನೇರ ಅವರ ಖಾತೆಗೆ ತಲುಪಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಕೆ.ಜಿ. ಯಲ್ಲಪ್ಪ ಮಾತನಾಡಿ, ಬಟ್ಟೆ ಹೊಲಿದು ಮರ್ಯಾದೆ ಮುಚ್ಚುವ ಟೈಲರ್‌ಗಳ ಬದುಕೇ ಮೂರಾಬಟ್ಟೆಯಾಗಿದೆ. ಟೈಲರ್ ಕಲ್ಯಾಣ ಮಂಡಳಿಯನ್ನು ಜಾರಿಗೊಳಿಸಿ, ಟೈಲರ್‌ಗಳಿಗೆ ಸರ್ಕಾರದ ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಜಿಲ್ಲಾಧ್ಯಕ್ಷ ನಾರಾಯಣರಾವ್ ಸುತ್ರಾವೆ, ಚಂದ್ರಶೇಖರ್ ಕೆ. ಗಣಪ, ಶ್ರೀನಿವಾಸ್ ಇಂಡಿ ಸೇರಿದಂತೆ ಇತರರು ಇದ್ದರು.

### ವಿಮೆ ಮಾಡಿಸಿಕೊಳ್ಳಿ

"ದೇಶದಲ್ಲಿ ಜೀವ ವಿಮೆ ಮಾಡಿಸಿಕೊಳ್ಳುವವರ ಸಂಖ್ಯೆ ಬಹಳಷ್ಟು ಕಡಿಮೆ. ವಿದೇಶದಲ್ಲಿ ಶೇ.80-90 ರಷ್ಟು ಮಂದಿ ವಿಮೆ ಮಾಡಿಸಿಕೊಂಡರೆ, ನಮ್ಮ ದೇಶದಲ್ಲಿ ಶೇ. 2-3 ರಷ್ಟು ಮಾತ್ರ. ಆಕಸ್ಮಿಕವಾಗಿ ಅಪಘಾತಕ್ಕೀಡಾದರೆ ವಿಮೆಯ ಹಣ ನಿಮ್ಮ ಕುಟುಂಬದವರ ಬದುಕಿಗೆ ಆಸರೆಯಾಗಲಿದ್ದು, ಕಾರ್ಮಿಕ ವರ್ಗದವರು ವಿಮೆ ಮಾಡಿಸಿಕೊಳ್ಳಲು ಹೆಚ್ಚಿನ ಗಮನ ಕೊಡಬೇಕು.

- ಎಸ್.ಟಿ. ವೀರೇಶ್, ಮೇಯರ್

## ನಗರಕ್ಕೆ ಇಂದು ಲಯನ್ಸ್ ಉಪ ರಾಜ್ಯಪಾಲ ನೆರಿ ಕಾನಿಲಿಯೋ



ಲಯನ್ಸ್ ಜಿಲ್ಲೆ 317ಸಿಯ ಎರಡನೇ ಉಪ ರಾಜ್ಯಪಾಲರ ಅಧಿಕೃತ ಭೇಟಿ, ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧನೆ ಹಾಗೂ ತೊದಲುವಿಕೆ ನಿವಾರಣಾ ಚಿಕಿತ್ಸಾ ಶಿಬಿರದ ಉದ್ಘಾಟನೆ ಹಾಗೂ ವಿವಿಧ ಸೇವಾ ಕಾರ್ಯಕ್ರಮಗಳು ಲಯನ್ಸ್ ಕ್ಲಬ್ ವತಿಯಿಂದ ಇಂದು ಬೆಳಿಗ್ಗೆ 11.30 ಕ್ಕೆ ಲಯನ್ಸ್ ಭವನದಲ್ಲಿ ನಡೆಯಲಿದೆ.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮವನ್ನು ಜಿಲ್ಲಾ ಲಯನ್ಸ್ ಉಪ ರಾಜ್ಯಪಾಲ ನೆರಿ ಕಾನಿಲಿಯೋ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಎನ್.ಜಿ. ಪುಟ್ಟಸ್ವಾಮಿ ಆಗಮಿಸುವರು. ದಾವಣಗೆರೆ ಅಗ್ನಿ ಶಾಮಕ ಠಾಣೆಯ ಲಂಬಾಣಿ ಮುನಿಸ್ವಾಮಿ ನಾಯಕ್, ಜಿಲ್ಲಾ ಮಾಧ್ಯಮ ಪ್ರಶಸ್ತಿ ಪುರಸ್ಕೃತ ಇ.ಎಂ. ಮಂಜುನಾಥ ಅವರುಗಳನ್ನು ಸನ್ಮಾನಿಸಲಾಗುವುದು.

ಅತಿಥಿಗಳಾಗಿ ಡಾ. ಬಿ.ಎಸ್. ನಾಗಪ್ರಕಾಶ್, ಎಸ್. ವೆಂಕಟಾಚಲಂ, ಸುಭಾಷ್ ಎಂ. ಮೋದಿ, ನೀಲಿ ಉಮೇಶ್ ಆಗಮಿಸುವರು.

## ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯಿಂದ ಪ್ರಬಂಧ ಸ್ಪರ್ಧೆ

ದಾವಣಗೆರೆ, ಅ.9- ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯು ತನ್ನ ವಾರ್ಷಿಕೋತ್ಸವದ ಅಂಗವಾಗಿ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದೆ.

ಡಾ.ಹೆಚ್.ಗಿರಿಜಮ್ಮನವರ ಬದುಕು-ಬರಹ ಕುರಿತಂತೆ 2-3 ಪುಟಗಳ ಲೇಖನವನ್ನು ಸಿದ್ದಪಡಿಸಿ, ಇದೇ ದಿನಾಂಕ 20 ರೊಳಗೆ ಕಳಿಸ ಬೇಕು. ಸ್ಪರ್ಧೆಯು ವಿದ್ಯಾರ್ಥಿ ವಿಭಾಗ ಮತ್ತು ಸಾರ್ವಜನಿಕ ವಿಭಾಗ ಹೊಂದಿರುತ್ತದೆ. ಲೇಖನಗಳನ್ನು ಕಳಿಸಬೇಕಾದ ವಿಳಾಸ : ಶ್ರೀಮತಿ ಮಲ್ಲಮ್ಮ ನಾಗರಾಜ್, ಮಾಂಟೆಸೊರಿ ಕಾನ್ವೆಂಟ್, ತ್ರಿಶೂಲ್ ಟಾಕೀಸ್ ಹಿಂಭಾಗ, 116/102 ಕಿರುವಾಡಿ ಲೇ ಔಟ್, ದಾವಣಗೆರೆ. (9980148289)

## ರೋಟರಿ ಕ್ಲಬ್‌ನಿಂದ 'ವಿದ್ಯಾಸೇತು' ಪುಸ್ತಕ ವಿತರಣೆ

ದಾವಣಗೆರೆ, ಅ.9- ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ, ಇನ್ನರ್‌ವ್ಹೀಲ್ ಕ್ಲಬ್, ರೋಟರ್‍ಯಾಕ್ಟ್ ದಾವಣಗೆರೆ ದಕ್ಷಿಣ ಹಾಗೂ ವಿಜಯವಾಣಿ ಪತ್ರಿಕೆ ಸಹಯೋಗದಲ್ಲಿ 'ವಿದ್ಯಾಸೇತು (ಬ್ರಿಡ್ಜ್ ಕೋರ್ಸ್) ಪುಸ್ತಕ ವಿತರಣಾ ಸಮಾರಂಭವು ನಾಗನೂರು ಮತ್ತು ಶಿರಮಗೊಂಡನಹಳ್ಳಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ನಡೆಯಿತು.



ರೋಟರಿ ಉಪ ರಾಜ್ಯಪಾಲ ಆರ್.ಜೆ. ಬದ್ರಿನಾಥ್ ಮಾತನಾಡಿ, ಕೋವಿಡ್-19 ಕಾರಣದಿಂದಾಗಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷೆ ಇಲ್ಲದೇ ಪಾಸಾಗಿರುವ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ವಿದ್ಯಾಸೇತು' ಪುಸ್ತಕ ನೆರವಾಗಲಿದೆ ಎಂದರು.

ಜಿಲ್ಲಾ ಕಾರ್ಯದರ್ಶಿ ನಾಗರಾಜ್ ಜಾಧವ್ ಮಾತನಾಡಿ, ಸರ್ಕಾರಿ ಪ್ರೌಢಶಾಲೆಗಳಲ್ಲಿ ರೋಟರಿ ಸಂಸ್ಥೆಯು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರಿಂದ 10 ನೇ ತರಗತಿ ಓದುತ್ತಿರುವ ಹಾಗೂ ಬಡ್ತಿ ಹೊಂದಿರುವ ಮಕ್ಕಳಿಗೆ ವಿಜ್ಞಾನ, ಗಣಿತ ಮತ್ತು ಸಮಾಜಶಾಸ್ತ್ರ ವಿಷಯಗಳಲ್ಲಿ ಆಯ್ದ ಪ್ರಶ್ನೋತ್ತರಗಳನ್ನು ಈ ಪುಸ್ತಕದಲ್ಲಿ ಅಳವಡಿಸಲಾಗಿದೆ. ಇದರಿಂದ ಮಕ್ಕಳಿಗೆ ಕಲಿಕೆ ಸಂದರ್ಭದಲ್ಲಿ ವಿದ್ಯೆಗೆ ಸೇತುವೆ ಯಾಗುವಂತೆ ಈ ವಿದ್ಯಾಸೇತು ಪುಸ್ತಕ ಉಪಯುಕ್ತವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಸುಜಿತ್‌ಕುಮಾರ್, ಕಾರ್ಯದರ್ಶಿಗಳಾದ ಪವನ್ ಪಡಗಲ್, ರಾಕೇಶ್, ಪುಟ್ಟೇಶ್, ಗೋವರ್ಧನ್, ಸೋಮಶೇಖರ್, ವಿಶ್ವಜಿತ್ ಜಾಧವ್, ಗಜಾನನ ಭೂತೆ, ಅಶೋಕ್ ರಾಯಭಾಗಿ, ಅಂಬರ್‌ಕರ್, ಬಸವರಾಜ್, ಮಹಮ್ಮದ್ ಗೌಸ್ ಮತ್ತಿತರರಿದ್ದರು.

## ಉತ್ತರ ಕ್ಷೇತ್ರದ ಕಾಂಗ್ರೆಸ್ ಅಧ್ಯಕ್ಷರಾಗಿ ಕೆ.ಜಿ. ಶಿವಕುಮಾರ್

ದಾವಣಗೆರೆ, ಅ. 9- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರನ್ನಾಗಿ ನಗರಸಭೆ ಮಾಜಿ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಹಾಗೂ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ಘಟಕದ ಅಧ್ಯಕ್ಷರನ್ನಾಗಿ ಹೆಚ್.ಗುರುರಾಜ್ ಅವರನ್ನು ನೇಮಕ ಮಾಡಲಾಗಿದೆ.



### ಜಿಲ್ಲಾ ಕಾಂಗ್ರೆಸ್ ಹಿಂದುಳಿದ ಘಟಕದ ಅಧ್ಯಕ್ಷರಾಗಿ ಹೆಚ್.ಗುರುರಾಜ್

ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಉಭಯರಿಗೆ ನೇಮಕಾತಿ ಪತ್ರ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್ ಕೆ.ಶೆಟ್ಟಿ, ಎಸ್.ಮಲ್ಲಿಕಾರ್ಜುನ್, ಕಾರ್ಯದರ್ಶಿ ಎ. ನಾಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ಉಪಾಧ್ಯಕ್ಷ ಹೆಚ್. ಜಯಣ್ಣ, ವಕ್ತಾರರಾದ ನಾಗರತ್ನಮ್ಮ, ಪಾಲಿಕೆ ಸದಸ್ಯರುಗಳಾದ ಜಿ.ಎಸ್. ಮಂಜುನಾಥ್, ಪಾಮೇನಹಳ್ಳಿ ನಾಗರಾಜ್, ಗಣೇಶ್ ಹುಲ್ಮನಿ, ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳಾದ ಸುಷ್ಮಾ ಪಾಟೀಲ್, ರಾಜೇಶ್ವರಿ, ಶುಭಮಂಗಳ, ಜಮ್ನಳ್ಳಿ ನಾಗರಾಜ್, ಸತೀಶ್, ನಂಜಾನಾಯ್ಕ ಮತ್ತಿತರರಿದ್ದರು.

## ವಾದ್ಯವೃಂದ ಕಲಾವಿದರಿಂದ ಇಂದು ಸುಗಮ ಸಂಗೀತೋತ್ಸವ

ದಾವಣಗೆರೆ ಜಿಲ್ಲಾ ವಾದ್ಯವೃಂದ ಕಲಾವಿದರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ದಾವಣಗೆರೆಯ ರೋಟರಿ ಬಾಲ ಭವನದಲ್ಲಿ ಸುಗಮ ಸಂಗೀತೋತ್ಸವ ನಡೆಯಲಿದೆ.

ಕಾರ್ಯಕ್ರಮದ ಸಾನ್ನಿಧ್ಯ ವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಎಸ್.ಟಿ. ವೀರೇಶ್ ಉದ್ಘಾಟಿಸುವರು. ಜಿಲ್ಲಾ ವಾದ್ಯವೃಂದ ಕಲಾವಿದರ ಸಂಘದ ಅಧ್ಯಕ್ಷ ಆರ್.ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ತಹಶೀಲ್ದಾರ್ ಬಿ. ಎನ್.ಗಿರೀಶ್, ಮುಖ್ಯ ಅತಿಥಿಗಳಾಗಿ ಬಿ.ಜೆ. ಅಜಯಕುಮಾರ್, ರವಿಚಂದ್ರ ಆಗಮಿಸಲಿದ್ದಾರೆ. ಜಿಲ್ಲಾ ವಾದ್ಯವೃಂದ ಕಲಾವಿದರ ಸಂಘದ ಗೌರವಾಧ್ಯಕ್ಷ ಚಿಂದೋಡಿ ಶಂಭುಲಿಂಗಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಬೆಳಿಗ್ಗೆ 11 ಗಂಟೆಗೆ ಬಿ.ಆರ್.ಹನುಮಂತಪ್ಪ ಮತ್ತು ತಂಡ ಮತ್ತು ಮಧ್ಯಾಹ್ನ 12 ಗಂಟೆಗೆ ಕೆ. ಸುರೇಶ್ ಮತ್ತು ತಂಡ ದಾವಣಗೆರೆ ಇವರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.


**Build a successful career path in software field**

1) Career guidance
2) Tips to crack the interview.
3) What skills required for the software (IT) field.
4) Resume Building technical and Presentation skills.
5) Free Demo on basic programming and how to search a software job from IT expert

All branch and degree students are welcomed for the Demo class.Please use the opportunity for your career growth.

**Classic computer Education**
97426 10385, 96119 66857

**SHREE VEERABHADRESHWARA CONSULTANCY SERVICES**

*CIVIL ENGINEERS AND DEVELOPERS*
# 80/18, Opp. P.J. Lodge, A.V.K. College Road, P.J. Extension, DAVANGERE-577 002.
Cell: 9916173399, 9343277422

WE OFFER THE FOLLOWING SERVICE :
✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS







**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ಮುಖ್ಯ ಕಛೇರಿ : ನಂ.75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-01. ಫೋ : 08192-271472
ಶಾಖಾ ಕಛೇರಿ : ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ ದಾವಣಗೆರೆ. ಫೋ : 08192-264536



ಬಿ.ವಿ. ಶಿವಾನಂದ ಅಧ್ಯಕ್ಷರು | ಬಿ.ನಾಗೇಂದ್ರಾಚಾರ್ (ಬಸಾಪುರ) ನಿರ್ದೇಶಕರು | ಎ.ಬಿ. ರವಿ ನಿರ್ದೇಶಕರು | ಹೆಚ್.ಎನ್.ಜಯಾಚಾರ್ (ಹಿರೇಮೇಗಳಗೆರೆ) ನಿರ್ದೇಶಕರು | ಬಿ. ಸಿದ್ದಾಚಾರ್ ನಿರ್ದೇಶಕರು | ಎಂ.ಪಿ.ನಾಗರಾಜ್ (ಶಾಮನೂರು) ನಿರ್ದೇಶಕರು | ಎಸ್.ನಾಗರಾಜಾಚಾರ್ (ಮಾಯಕೊಂಡ) ನಿರ್ದೇಶಕರು | ಎನ್.ಪೂರ್ವಾಚಾರ್ ನಿರ್ದೇಶಕರು | ವಿ.ಎಂ. ಕೊಟ್ರೇಶಾಚಾರ್ ನಿರ್ದೇಶಕರು | ಆರ್.ರೇಖಾ ರಮೇಶ್ ನಿರ್ದೇಶಕರು | ನೀಲಾವತಿ ಮಂಜುನಾಥಾಚಾರ್ ನಿರ್ದೇಶಕರು | ಭಾಗ್ಯಮ್ಮ ಮಂಜುನಾಥ ನಿರ್ದೇಶಕರು | ಸಿ.ಆರ್.ಬಡಿಗೇರ್ ಕಾರ್ಯದರ್ಶಿ | ಬಿ.ಎನ್. ಭೀಷ್ಮಾಚಾರ್ ಶಾಖಾ ವ್ಯವಸ್ಥಾಪಕರು | ಆರ್.ವಿಜಯಕುಮಾರ್ ಉಪಾಧ್ಯಕ್ಷರು

**ಸಂಘದ ಆರ್ಥಿಕ ಪ್ರಗತಿಯ ಪಕ್ಷಿನೋಟ (ಲಕ್ಷ ರೂ.ಗಳಲ್ಲಿ)**

| ಕ್ರ. ಸಂ. | ವಿವರಗಳು | 2019-20 | 2020-21 |
|---|---|---|---|
| 1 | ಷೇರು ಬಂಡವಾಳ | 50.05 | 49.60 |
| 2 | ಸದಸ್ಯರ ಠೇವಣಿಗಳು | 538.78 | 639.99 |
| 3 | ಸಾಲ ಮತ್ತು ಮುಂಗಡಗಳು | 499.13 | 561.92 |
| 4 | ದುಡಿಯುವ ಬಂಡವಾಳ | 655.73 | 766.94 |
| 5 | ಲಾಭ | 8.89 | 9.26 |
| 6 | ಡಿವಿಡೆಂಡ್ | 10% | 10% (ಉದ್ದೇಶಿತ) |
| 7 | ಸದಸ್ಯರುಗಳು | 3386 | 3399 |

**24ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ, ಸೊಸೈಟಿಯ 2020-21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 10.10.2021ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ವಸಂತ ರಸ್ತೆಯಲ್ಲಿರುವ ನಮ್ಮ ಸಂಸ್ಥೆಯ 'ಮುಖ್ಯ ಕಚೇರಿ'ಯಲ್ಲಿ ಅಧ್ಯಕ್ಷರಾದ ಶ್ರೀ ಬಿ.ವಿ. ಶಿವಾನಂದ ಇವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಕಾರಣ ಸೊಸೈಟಿಯ ಎಲ್ಲಾ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿಸಲಾಗಿದೆ. ಮಹಾಸಭೆಯ ಆಹ್ವಾನವನ್ನು ಮಾನ್ಯ ಸದಸ್ಯರುಗಳಿಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಕಳುಹಿಸುವುದರ ಜೊತೆಗೆ, ಈ ಪತ್ರಿಕಾ ಪ್ರಕಟಣೆ ಮೂಲಕವೂ ತಿಳಿಸಲಾಗಿದೆ.
ಮಾನ್ಯ ಎಲ್ಲಾ ಸದಸ್ಯರು ಮಹಾಸಭೆಗೆ ಆಗಮಿಸುವಂತೆ ವಿನಂತಿಸಲಾಗಿದೆ.

ವಿಶೇಷ ಸೂಚನೆ : ಸದಸ್ಯರುಗಳು ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸಬೇಕು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕೆಂದು ವಿನಂತಿ.

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
**ಸಿ.ಆರ್. ಬಡಿಗೇರ್**
ಕಾರ್ಯದರ್ಶಿ




## ರಾಷ್ಟ್ರಪತಿ ಸಂವಾದದಲ್ಲಿ ನ್ಯಾಯಮೂರ್ತಿ ಡಾ. ಹೆಚ್.ಬಿ.ಪ್ರಭಾಕರ ಶಾಸ್ತ್ರಿ



ದಾವಣಗೆರೆ, ಅ.9 - ರಾಷ್ಟ್ರಪತಿಯವ ರೊಂದಿಗೆ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳ ವಿಶೇಷ ಚಹಾಕೂಟ ಹಾಗೂ ಸಂವಾದವು ಬೆಂಗಳೂರಿನ ರಾಜಭವನದಲ್ಲಿ ನಿನ್ನೆ ನಡೆಯಿತು.

ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಿರುವ ದಾವಣಗೆರೆ ಮೂಲದ ಡಾ. ಹೆಚ್. ಬಿ.ಪ್ರಭಾಕರ ಶಾಸ್ತ್ರೀ ಅವರು ರಾಷ್ಟ್ರಪತಿಯವರಿಗೆ ವಂದಿಸಿದರು. ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ಸಹ ಇದ್ದಾರೆ.

ಡಾ.ಪ್ರಭಾಕರ ಶಾಸ್ತ್ರಿ ಅವರು ಹಿರಿಯ ಪತ್ರಕರ್ತ ಎಚ್.ಬಿ.ಮಂಜುನಾಥ ಅವರ ಕಿರಿಯ ಸಹೋದರರು.

## ನಗರದ ಸಾಯಿ ಮಂದಿರದಲ್ಲಿ ಸತ್ಯನಾರಾಯಣ ಸ್ವಾಮಿ ಪೂಜೆ

ಶ್ರೀ ಸಾಯಿಬಾಬಾರ 103ನೇ ಪುಣ್ಯಾರಾಧನೆ ಮಹೋತ್ಸವದ ಅಂಗವಾಗಿ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಶ್ರೀ ಸಾಯಿ ಸತ್ಯನಾರಾಯಣ ಸ್ವಾಮಿ ಪೂಜೆಯನ್ನು 101 ದಂಪತಿಗಳಿಂದ ಸಾಮೂಹಿಕವಾಗಿ ಇಂದು ನಡೆಯಲಿದೆ. ಪೂಜೆ ನಂತರ ಮಹಾಮಂಗಳಾರತಿ ಜರುಗಲಿದೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

## ಜಿಲ್ಲಾ ಮಟ್ಟದ ಯುವ ಜನೋತ್ಸವ

ದಾವಣಗೆರೆ, ಅ.9- ಯುವ ಸಬಲೀಕರಣ ಮತ್ತು ಕ್ರಿಡಾ ಇಲಾಖೆಯು ಈ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವ ಆಯ್ಕೆ ಸ್ಪರ್ಧೆಗಳನ್ನು ಅಕ್ಟೋಬರ್ ತಿಂಗಳ 2ನೇ ವಾರದಲ್ಲಿ ಸಂಘಟಿಸಲು ತೀರ್ಮಾನಿಸಿದ್ದು, 15 ರಿಂದ 19 ವರ್ಷ ವಯೋಮಿತಿಯೊಳಗಿನ ಎಲ್ಲಾ ಯುವಜನರು ಭಾಗವಹಿಸಬಹುದು.

ಸ್ಪರ್ಧಾಳುಗಳು ತಮ್ಮ ಹೆಸರನ್ನು ಸಹಾಯಕ ನಿರ್ದೇಶಕರ ಕಚೇರಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇವರ ಕಚೇರಿಯಲ್ಲಿ ಇದೇ ದಿನಾಂಕ 13 ರೊಳಗೆ ನೋಂದಾಯಿಸುವುದು. ವಿವರಕ್ಕೆ ಸಂಪರ್ಕಿಸಿ : ಫೋ: 08192-237480.

## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಶ್ರೀ ಟಿ.ಎಸ್. ಶಿವಣ್ಣನವರು**

ಅಡುಗೆ ಕಂಟ್ರ್ಯಾಕ್ಟರ್, ವಿನೋಬನಗರ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ ನಿಮ್ಮ ಕುಟುಂಬ ವರ್ಗದವರು

ಪತ್ನಿ : ✦ ಶ್ರೀಮತಿ ಗೌರಮ್ಮ ಶಿವಣ್ಣನವರು
ಮಕ್ಕಳು : ✦ ಎಸ್. ಬಸವರಾಜ್, ಶ್ರೀಮತಿ ರಾಜೇಶ್ವರಿ
✦ ಟಿ.ಎಸ್. ರುದ್ರೇಶ್, ಶ್ರೀಮತಿ ವಾಣಿಶ್ರೀ
✦ ಹೆಚ್.ಎಂ. ವೀರೇಶ್, ಶ್ರೀಮತಿ ಮಂಜುಳ
✦ ಕೆ.ಎಂ. ಗಂಗಾಧರ ಸ್ವಾಮಿ, ಶ್ರೀಮತಿ ವೀಣಾ
✦ ಹೆಚ್.ಎಂ. ರುದ್ರಮುನಿ ಸ್ವಾಮಿ, ಶ್ರೀಮತಿ ಹೇಮಲತಾ
ಮೊಮ್ಮಕ್ಕಳು : ✦ ಚಿ॥ ಅಭಯ್ ✦ ಕು॥ ಸನಿಹ
✦ ಮಹಡಿ ಮನೆ ವಂಶಸ್ಥರು, ದಾವಣಗೆರೆ.

SCIENCE ACADEMY (R.)
(A UNIQUE CENTRE FOR P.U. CLASSES)
# 307 / 2B, I FLOOR, 2ND MAIN, P.J. EXTN, NEAR STADIUM, DAVANGERE – 4
ADMISSION STARTED FOR
II PUC SCIENCE PCMB TUITIONS
(THEORY + KCET)
Classes start from 25th October 2021
You just pay fee for Theory Tutions and Get free CET Coaching
For more Details contact: Office: 08192 – 257546, Mobile: 9980368779, 9448178087
We don't have any other branches in Davangere in the name of Academy










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte